ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು




**ಜನವರಿ ೧ನೇ ವಾರ**

29-12-2025 TO 03-01-2026

# 'ಕುಕ್ಕೆ' ಅತ್ಯಂತ ಶ್ರೀಮಂತ ದೇಗುಲ

- ಕದಂಬ ನೌಕಾನೆಲೆ: ಐಎನ್‌ಎಸ್ ವಾಘಶೀರ್
- ಮರ್ಯಾದೆಗೇಡು ಹತ್ಯೆಗೆ ಜೈಲು
- ಅತಿವಿರಳ 'ಚಂದನ ಚಿರತೆ' ಗೋಚರ
- ಜಪಾನ್ ಹಿಂದಿಕ್ಕಿದ ಭಾರತ

## ❖ ಜಲಾಂತರ್ಗಾಮಿಯಲ್ಲಿ ರಾಷ್ಟ್ರಪತಿ: ಕದಂಬ ನೌಕಾನೆಲೆ: “ಐಎನ್‌ಎಸ್ ವಾಘಶೀರ್'ನಲ್ಲಿ ಯಾನ


**ಸಂದರ್ಭ: ಇಲ್ಲಿನ ಕದಂಬ ನೌಕಾನೆಲೆಯಲ್ಲಿ ವಾಘಶೀರ್' 'ಐಎನ್‌ಎಸ್ ಜಲಾಂತರ್ಗಾಮಿ ನೌಕೆಯಲ್ಲಿ (ಸಬ್ ಮೆರೀನ್) ರಾಷ್ಟ್ರಪತಿ ದ್ರೌಪದಿ ಮುರ್ಮು ಭಾನುವಾರ ಎರಡು ತಾಸಿಗೂ ಹೆಚ್ಚು ಸಂಚಾರ ನಡೆಸಿದರು.**

- ಈ ಮೂಲಕ ಎಪಿಜೆ ಅಬ್ದುಲ್ ಕಲಾಂ ಬಳಿಕ ಜಲಾಂತರ್ಗಾಮಿ ನೌಕೆಯಲಿ ಸಂಚರಿಸಿದ ಎರಡನೇ ರಾಷ್ಟ್ರಪತಿ ಅವರಾದರು. ದ್ರೌಪದಿ ಅವರು ಕದಂಬ ನೌಕಾನೆಲೆಗೆ ಭೇಟಿ ನೀಡಿದ ಮೊದಲ ರಾಷ್ಟ್ರಪತಿ ಆಗಿದ್ದಾರೆ.
- ನೌಕಾದಳದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಗೋವಾದಿಂದ ಬೆಳಿಗ್ಗೆ 9 ಗಂಟೆಗೆ ನೌಕಾನೆಲೆಗೆ ಬಂದ ರಾಷ್ಟ್ರಪತಿ ಅವರನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಬರಮಾಡಿಕೊಂಡರು. ಬಳಿಕ ನೌಕಾದಳದ ದಿರಿಸು ಧರಿಸಿ, ಜಲಾಂತರ್ಗಾಮಿ ನೌಕೆಯ ಬಳಿ ತೆರಳಿದ ಅವರು. ನೌಕಾದಳದ ಸಿಬ್ಬಂದಿಯತ್ತ ಕೈಬೀಸುತ್ತ ನೌಕೆಯೊಳಗೆ ಹೋದರು. ಜಲಾಂತರ್ಗಾಮಿ ನೌಕೆ ಸಮುದ್ರದ ಒಳಗೆ ಎರಡು ತಾಸು ಸಂಚರಿಸಿತು. ನೌಕೆಯೊಳಗೆ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿ ಜತೆ ಚರ್ಚೆ ನಡೆಸಲಾಯಿತು ಎಂದು ಸಂಚಾರದ ಬಳಿಕ ರಾಷ್ಟ್ರ ಪತಿ ಅವರ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಳ್ಳಲಾಗಿದೆ.
- 'ದೇಶದ ಕಡಲ ಕಾರ್ಯತಂತ್ರ ದಲ್ಲಿ ಜಲಾಂತರ್ಗಾಮಿ ಪಡೆಯ ಪಾತ್ರ, ಕಾರ್ಯಾಚರಣೆಯ ಸಾಮರ್ಥ್ಯ ಮತ್ತು ಕೊಡುಗೆಗಳ ಬಗ್ಗೆ ರಾಷ್ಟ್ರಪತಿ ಮಾಹಿತಿ ಪಡೆದರು. ಜಲಾಂತರ್ಗಾಮಿ ಪಡೆಯ ಸಮರ್ಪಣೆ, ಬದ್ಧತೆ ಮತ್ತು ನಿಸ್ವಾರ್ಥ ಸೇವಾ ಮನೋಭಾವವನ್ನು ಶ್ಲಾಘಿಸಿದರು.
- ವಾಘಶೀರ್ ಜಲಾಂತರ್ಗಾಮಿ ನೌಕೆ ಭಾರತೀಯ ನೌಕಾಪಡೆಯ ವೃತ್ತಿಪರ ಶ್ರೇಷ್ಠತೆ, ಯುದ್ಧ ಸನ್ನದ್ಧತೆ ಮತ್ತು ರಾಷ್ಟ್ರೀಯ ಭದ್ರತೆಗೆ ಅಚಲ ಬದ್ಧತೆಯ ಪ್ರತೀಕ ಎಂದು ಕೊಂಡಾಡಿದರು' ಎಂದು ವಿವರಿಸಿದ್ದಾರೆ.

## ❖ ಅರಾವಳಿ: 'ಸುಪ್ರೀಂ'ನಲ್ಲಿ ವಿಚಾರಣೆ ಇಂದು

**ಸಂದರ್ಭ: ಅರಾವಳಿ ಬೆಟ್ಟ ಮತ್ತು ಶ್ರೇಣಿಗಳ ಬಗೆಗಿನ ಮರುವ್ಯಾಖ್ಯಾನ ಕುರಿತು ಆಕ್ಷೇಪ ವ್ಯಕ್ತ ವಾಗಿರುವ ಕಾರಣ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಸುಪ್ರೀಂ ಕೋರ್ಟ್ ಈ ಬಗ್ಗೆ ಸೋಮವಾರ ವಿಚಾರಣೆ ನಡೆಸಲಿದೆ.**

- ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಗಳಾದ ಜೆ.ಕೆ ಮಾಹೇಶ್ವರಿ ಮತ್ತು ಆಗಸ್ಟಿನ್ ಮಸೀಹ್ ಅವರನ್ನೊಳಗೊಂಡ ರಜಾ ಕಾಲದ ಪೀಠವು ಪ್ರಕರಣದ ವಿಚಾರಣೆ ನಡೆಸುವ ಸಾಧ್ಯತೆಯಿದೆ.



ವಿವಾದವೇನು?

ಅರಾವಳಿ ಬೆಟ್ಟ ಮತ್ತು ಶ್ರೇಣಿಗಳ ಸಂರಕ್ಷಣೆಗಾಗಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸಮಿತಿ ನೀಡಿದ್ದ ಏಕರೂಪದ ವ್ಯಾಖ್ಯಾನ ವನ್ನು ಸುಪ್ರೀಂ ಕೋರ್ಟ್ ನವೆಂಬರ್ 20ರಂದು ಅನುಮೋದಿಸಿತ್ತು. ತಜ್ಞರು ವರದಿ ಸಲ್ಲಿಸಿದ ನಂತರ ಹರಿಯಾಣ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಹೊಸದಾಗಿ ಗಣಿಗಾರಿಕೆ ಕೈಗೊಳ್ಳಲು ಅನುಮತಿ ನೀಡುವುದನ್ನು ಇದೇ ವೇಳೆ ನಿರ್ಬಂಧಿಸಿತ್ತು.

ರಾಜಸ್ಥಾನ, ಗುಜರಾತ್, ಹರಿಯಾಣದಲ್ಲಿರುವ ಅರಾವಳಿ ಜಿಲ್ಲೆಗಳಲ್ಲಿನ ನೂರು ಮೀಟರ್ ಮತ್ತು ಅದಕ್ಕಿಂತ ಎತ್ತರದ ಭೂಪ್ರದೇಶಗಳನ್ನು ಅರಾವಳಿ ಬೆಟ್ಟಗಳು ಮತ್ತು 500 ಮೀಟರ್ ಅಂತರದಲ್ಲಿರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಬೆಟ್ಟಗಳನ್ನು ಅರಾವಳಿ ಶ್ರೇಣಿಗಳೆಂದು ಪರಿಗಣಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು.


ಈ ಮರುವ್ಯಾಖ್ಯಾನದಿಂದಾಗಿ ಅರಾವಳಿ ವ್ಯಾಪ್ತಿಯ ನೂರು ಮೀಟರ್‌ಗಿಂತ ಕಡಿಮೆ ಎತ್ತರದ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಮಾನವ ಹಸ್ತಕ್ಷೇಪ ನಡೆದು ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಆಕ್ಷೇಪಿಸಿ ರಾಜಸ್ಥಾನ, ಹರಿಯಾಣ ಮತ್ತು ಗುಜರಾತ್‌ನಲ್ಲಿ ವ್ಯಾಪಕ ಪ್ರತಿಭಟನೆಗಳು ಆರಂಭಗೊಂಡಿವೆ.

## ❖ ಭಾರತಕ್ಕೆ ಸಿ-130ಜೆ ನೀಡಲು ಮುಂದಾದ ಲಾಕ್‌ಹೀಡ್

**ಸಂದರ್ಭ: ಸುಮಾರು 80 ವಿಮಾನಗಳ ಖರೀದಿಗೆ ಭಾರತ ಸಿದ್ಧತೆ ನಡೆಸುತ್ತಿದ್ದು, ಅಮೆರಿಕದ ಪ್ರಮುಖ ಏರೋಸ್ಪೇಸ್ ಕಂಪನಿ ಲಾಕ್‌ಹೀಡ್ ಮಾರ್ಟಿನ್ ತನ್ನ ಸಿ-130ಜೆ ಸೂಪರ್ ಹೆರ್ಕ್ಯುಲಸ್ ನೀಡಲು ಮುಂದೆ ಬಂದಿದೆ.**

- ಕ್ವಾಡ್ ಸದಸ್ಯ ರಾಷ್ಟ್ರಗಳಿಗೆ ಕಂಪನಿಯು ಬಲಿಷ್ಠವಾದ ವಿಮಾನವನ್ನು ಪೂರೈಕೆ ಮಾಡಲಿದೆ ಎಂದು ಲಾಕ್‌ಹೀಡ್ ಮಾರ್ಟಿನ್ ತಿಳಿಸಿದೆ.

## ❖ ISRO



# ಬಾಹ್ಯಾಕಾಶ: ಇಸ್ರೊಗೆ ವರ್ಷಪೂರ್ತಿ ಸಾಧನೆಯ ಫಸಲು

ಇಸ್ರೊ ಪಾಲಿಗೆ 2025, ಸಾಧನೆಗಳ ಸಂಭ್ರಮ, ಮೈಲಿಗಲ್ಲುಗಳನ್ನು ಸಾಧಿಸಿದ ವರ್ಷ. ಎರಡು ಎಸ್‌ಪಿಇಎಕ್ಸ್ ಉಪಗ್ರಹಗಳ ಯಶಸ್ವಿ ಡಾಕಿಂಗ್, 100ನೇ ಉಪಗ್ರಹ ಉಡಾವಣೆ ಮೂಲಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಶತಕದ ಸಾಧನೆ ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಭಾರತೀಯನ ಮೊದಲ ಹೆಜ್ಜೆ, ಇಂಥ ಹಲವು ಫಸಲು ಈ ವರ್ಷ ಇಸ್ರೊದ ಸಾಧನೆಯ ಬುಟ್ಟಿಗೆ ಸೇರಿವೆ

• ಗಾಣಧಾಳು ಶ್ರೀಕಂಠ

**'ಜೋಡಣೆ-ಬೇರ್ಪಡಿಸುವಿಕೆ':** ವರ್ಷಾರಂಭದಲ್ಲಿ (ಜನವರಿ 16) ಇಸ್ರೊ, ತನ್ನದೇ ಆದ ಡಾಕಿಂಗ್ ವ್ಯವಸ್ಥೆಯನ್ನು ಬಳಸಿಕೊಂಡು ಕಕ್ಷೆಯಲ್ಲಿ ಉಪಗ್ರಹ ಡಾಕಿಂಗ್ (ಸ್ಪೇಡೆಕ್ಸ್–ಎಸ್‌ಪಿಎಡಿಇಎಕ್ಸ್) ಪ್ರಯೋಗವನ್ನು ಯಶಸ್ವಿಯಾಗಿ ನೆರವೇರಿಸಿತು. ಇದರಲ್ಲಿ ಬಾಹ್ಯಾಕಾಶದಲ್ಲಿ ನಿರ್ದಿಷ್ಟ ಕಕ್ಷೆಯಲ್ಲಿ ತಿರುಗುವ ಒಂದು ಉಪಗ್ರಹವು ಮತ್ತೊಂದು ಉಪಗ್ರಹವನ್ನು ಶೋಧಿಸಿ ಅದಕ್ಕೆ ತಾನೇ ಜೋಡಿಸಿಕೊಳ್ಳುವ ವ್ಯವಸ್ಥೆ ಇದು. ಈ ಪ್ರಯೋಗದ ಮೂಲಕ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಅಮೆರಿಕ, ರಷ್ಯಾ, ಚೀನಾ ರಾಷ್ಟ್ರಗಳ ಗುಂಪಿಗೆ ಭಾರತ ಸೇರಿತು. ಇದೇ ರೀತಿ ಮಾ.13ರಂದು ಉಪಗ್ರಹಗಳನ್ನು ಬೇರ್ಪಡಿಸುವಲ್ಲಿಯೂ (ಅನ್‌ಡಾಕಿಂಗ್) ಯಶಕಂಡಿತು

**ಉಡಾವಣೆ 100:** ಇಸ್ರೊ ಸಾಧನೆಗಳಿಗೆ 'ಚಿಮ್ಮುಹಲಗೆ' ಯಾಗಿರುವ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ, ಪ್ರತಿ ವರ್ಷ ಹಲವು ಉಪಗ್ರಹಗಳ ಉಡಾವಣೆಗೆ ಸಾಕ್ಷಿಯಾಗುತ್ತದೆ. ಆದರೆ, ಈ ವರ್ಷದ ಜನವರಿ 29 ವಿಶೇಷ ದಿನ. ಅಂದು ಈ ಕೇಂದ್ರದಿಂದ 100ನೇ ರಾಕೆಟ್ ಉಡಾವಣೆಯಾಯಿತು. ಜಿಎಸ್‌ಎಲ್‌ವಿ-ಎಫ್15 ರಾಕೆಟ್, ಎನ್‌ವಿಎಸ್-02 ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿತು.

**'ನಿಸಾರ್' ವಿಶೇಷ:** ಭೂ ವೀಕ್ಷಣೆ ಉದ್ದೇಶದಿಂದ ಇಸ್ರೊ ಹಾಗೂ ಅಮೆರಿಕದ ನಾಸಾ ಜಂಟಿಯಾಗಿ ಅಭಿವೃದ್ಧಿಪಡಿಸಿರುವ 'ನಿಸಾರ್' ('ನಾಸಾ-ಇಸ್ರೊ ಸಿಂಥೆಟಿಕ್ ಅಪಾರ್ಚರ್ ರೇಡಾರ್') ಉಪಗ್ರಹ ಉಡಾವಣೆ ಈ ಬಾರಿಯ ಮತ್ತೊಂದು ವಿಶೇಷ. ಜುಲೈ 30ರಂದು ಈ ಉಪಗ್ರಹ ಹೊತ್ತ ಜಿಎಸ್‌ಎಲ್‌ವಿ-ಎಫ್16 ರಾಕೆಟ್ ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿನ ಉಡ್ಡಯನ ನೆಲೆಯಿಂದ ಆಗಸಕ್ಕೆ ಚಿಮ್ಮಿತು. ಭೂ ವೀಕ್ಷಣೆ ಉದ್ದೇಶದಿಂದ ಉಪಗ್ರಹ ನಿರ್ಮಾಣ ಹಾಗೂ ಉಡಾವಣೆಗಾಗಿ ರೂಪಿಸಲಾಗಿರುವ ಬಾಹ್ಯಾಕಾಶ ಕಾರ್ಯಕ್ರಮವೇ 'ನಿಸಾರ್'

**ಪ್ಯಾರಾಚೂಟ್ ವ್ಯವಸ್ಥೆ:** ಗಗನಯಾನ ಯೋಜನೆಗಳಲ್ಲಿ ಬಳಸಲಾಗುವ ಬಾಹ್ಯಾಕಾಶ ಕೋಶವು ಭೂಮಿಗೆ ಮರಳುವಾಗ ಅದು ಯಶಸ್ವಿಯಾಗಿ ಭೂಸ್ಪರ್ಶಿಸುವಂತೆ ಮಾಡಲು ಪ್ಯಾರಾಚ್ಯೂಟ್ ಆಧಾರಿತವಾಗಿ ಇಳಿಯುವ ವ್ಯವಸ್ಥೆಯ ಪರೀಕ್ಷೆಯನ್ನು ಇಸ್ರೊ ಆಗಸ್ಟ್‌ನಲ್ಲಿ ಯಶಸ್ವಿಯಾಗಿ ನಡೆಸಿತು

**ಸಂವಹನ ಉಪಗ್ರಹ-ಬಾಹುಬಲಿ:** ಇಸ್ರೊ, ಹೊಸ ತಲೆಮಾರಿನ, ಸ್ವದೇಶಿ ನಿರ್ಮಿತ 'ಬಾಹುಬಲಿ' ರಾಕೆಟ್ ಮೂಲಕ ಅತ್ಯಂತ ಭಾರವಾದ ಉಪಗ್ರಹವನ್ನು ಕಕ್ಷೆಗೆ ಸೇರಿಸುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದು ಇಸ್ರೊದ ಈ ವರ್ಷದ ಮತ್ತೊಂದು ಮೈಲಿಗಲ್ಲು. ಶ್ರೀಹರಿಕೋಟಾದ ಬಾಹ್ಯಾಕಾಶ ಕೇಂದ್ರದಿಂದ ನವೆಂಬರ್ 2ರಂದು 4,410 ಕೆ.ಜಿ ತೂಕದ ಸಂವಹನ ಉಪಗ್ರಹವನ್ನು (ಸಿಎಂಎಸ್-03) ಹೊತ್ತು ನಭಕ್ಕೆ ಚಿಮ್ಮಿದ ಲಾಂಚ್ ವೆಹಿಕಲ್ ಮಾರ್ಕ್-3 (ಎಲ್‌ವಿಎಂ3-ಎಂ5) 'ಬಾಹುಬಲಿ'ಯು ಆತ್ಮನಿರ್ಭರ ಭಾರತದ ಅಭಿಮಾನದ ಕ್ಷಣಗಳಿಗೆ ಸಾಕ್ಷಿಯಾಯಿತು

**ಐಎಸ್‌ಎಸ್‌ನಲ್ಲಿ...**

'ಆಕ್ಸಿಯಂ-4' ಅಂತರಿಕ್ಷ ಕಾರ್ಯಕ್ರಮದ ಭಾಗವಾಗಿ ಜೂನ್ 25ರಂದು, ಭಾರತದ ಗಗನಯಾನಿ ಶುಭಾಂಶು ಶುಕ್ಲಾ, ಹಂಗರಿ, ಪೋಲೆಂಡ್‌ನ ಗಗನಯಾತ್ರಿಗಳೊಂದಿಗೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ತೆರಳಿದರು. 18 ದಿನಗಳ ಈ 'ಗಗನ ಯಾತ್ರೆ'ಯಲ್ಲಿ ಸಹ ವಿಜ್ಞಾನಿಗಳ ಜೊತೆಗೂಡಿ ಐಎಸ್‌ಎಸ್‌ನಲ್ಲಿ 60ಕ್ಕೂ ಹೆಚ್ಚು ಪ್ರಯೋಗಗಳನ್ನು ನಡೆಸಿದರು. ಭಾರತೀಯರೊಬ್ಬರು ಐಎಸ್‌ಎಸ್‌ಗೆ ಹೋಗಿದ್ದು ಇದೇ ಮೊದಲು.

**ಪ್ರೊಪಲ್ಷನ್ - ಕ್ರಯೋಜೆನಿಕ್ ಅಭಿವೃದ್ಧಿ:** ಭಾರತವು 2025ರಲ್ಲಿ ಪ್ರೊಪಲ್ಷನ್ ಮತ್ತು ಕ್ರಯೋಜೆನಿಕ್ ಹಂತದ ಎಂಜಿನ್ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿತು. ಜುಲೈ 3ರಂದು ಮಹೇಂದ್ರಗಿರಿಯಲ್ಲಿರುವ ಪ್ರೊಪಲ್ಷನ್ ಕಾಂಪ್ಲೆಕ್ಸ್‌ನಲ್ಲಿ ಮಾನವಸಹಿತ ಬಾಹ್ಯಾಕಾಶ ಕಾರ್ಯಕ್ರಮ 'ಗಗನಯಾನ'ದ 'ಸರ್ವಿಸ್ ಮಾಡ್ಯೂಲ್ ಪ್ರೊಪಲ್ಷನ್ ಸಿಸ್ಟಮ್' (ಎಸ್‌ಎಂಪಿಎಸ್) ಮತ್ತೆ ಎರಡು 'ಹಾಟ್ ಟೆಸ್ಟ್'ಗಳನ್ನು ಯಶಸ್ವಿಯಾಗಿ ನಡೆಸಲಾಯಿತು

**ಸಂಭ್ರಮದ ವರ್ಷಾಂತ್ಯ:** ವರ್ಷಾಂತ್ಯವೂ ಇಸ್ರೊ ಪಾಲಿಗೆ ಸಾಧನೆ ಸಂಭ್ರಮ. ಡಿಸೆಂಬರ್ 24ರಂದು ಸ್ವದೇಶಿ ನಿರ್ಮಿತ 'ಬಾಹುಬಲಿ' ರಾಕೆಟ್ ಮೂಲಕ ಹೊಸ ತಲೆಮಾರಿನ ಅಮೆರಿಕದ ಸಂವಹನ ಉಪಗ್ರಹವನ್ನು ಯಶಸ್ವಿಯಾಗಿ ನಿಗದಿತ ಕಕ್ಷೆಗೆ ಸೇರಿಸಲಾಯಿತು. 6,100 ಕೆ.ಜಿ ತೂಕದ ಬ್ಲೂಬರ್ಡ್ ಬ್ಲಾಕ್-2 ಉಪಗ್ರಹವನ್ನು ಹೊತ್ತ ಎಲ್‌ವಿಎಂ3-ಎಂ6 ರಾಕೆಟ್, ನಭಕ್ಕೆ ಚಿಮ್ಮಿತು. ಭಾರತದ ಮಣ್ಣಿನಿಂದ ಉಡಾವಣೆಯಾದ ಅತ್ಯಂತ ಭಾರವಾದ ಉಪಗ್ರಹ ಇದು

**ರಕ್ಷಣಾ ಕ್ಷೇತ್ರ**

**ಶತ್ರುಗಳ ಅತ್ಯಾಧುನಿಕ 'ಶಸ್ತ್ರಾಸ್ತ್ರ'ಗಳನ್ನು ಹೊಡೆದುರುಳಿಸುವ** ಸ್ವದೇಶಿ ನಿರ್ಮಿತ ಆಕಾಶ್ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿದ್ದು, ಕಡಿಮೆ ಎತ್ತರದಲ್ಲಿರುವ ಗುರಿಯನ್ನು ಧ್ವಂಸ ಮಾಡುವ ವಿಎಸ್‌ಎಚ್‌ಒಆರ್‌ಎಡಿಎಸ್, ಲೇಸರ್ ಕಿರಣಗಳ ಮೂಲಕ ಶತ್ರುಗಳ ವಿಮಾನ, ಡ್ರೋನ್, ಕ್ಷಿಪಣಿಗಳನ್ನು ನಿರ್ನಾಮ ಮಾಡುವ ಡಿಇಡಬ್ಲ್ಯು... ಇವು 2025ರ ಭಾರತೀಯ ರಕ್ಷಣಾ ಕ್ಷೇತ್ರದಲ್ಲಿ ಹೆಚ್ಚು ಸದ್ದು ಮಾಡಿದ ರಕ್ಷಣಾ ಸಾಧನೆಗಳು

- ಈ ವರ್ಷದ ಫೆಬ್ರುವರಿ 1ರಂದು ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಅತ್ಯಂತ ಕಡಿಮೆ ಎತ್ತರದಲ್ಲಿರುವ ವಾಯು ರಕ್ಷಣಾ ವ್ಯವಸ್ಥೆಯ (ವಿಎಸ್‌ಎಚ್‌ಒಆರ್ ಎಡಿಎಸ್) ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಇದರ ಮೂಲಕ 600 ಮೀಟರ್‌ನಿಂದ 6 ಕಿ.ಮೀ ದೂರದಲ್ಲಿರುವ ಗುರಿಯನ್ನು ನಾಶಪಡಿಸಬಹುದು
- ಲೇಸರ್ ಕಿರಣಗಳ ಮೂಲಕ ಶತ್ರುಗಳ ವಿಮಾನ, ಡ್ರೋನ್, ಕ್ಷಿಪಣಿಯನ್ನು ನಾಶ ಮಾಡುವ ಅಸ್ತ್ರ ಲೇಸರ್ ಬೇಸ್ಡ್ ಡೈರೆಕ್ಟೆಡ್ ಎನರ್ಜಿ ವೆಪನ್. ಡಿಆರ್‌ಡಿಒ ಏಪ್ರಿಲ್ 13ರಂದು ಈ ಸಾಧನದ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿತು. ಗರಿಷ್ಠ 3.5 ಕಿ.ಮೀ ದೂರದಲ್ಲಿರುವ ಗುರಿಗಳನ್ನು ಧ್ವಂಸ ಮಾಡಬಲ್ಲ ಸಾಮರ್ಥ್ಯ ಇದರದ್ದು
- ಜುಲೈ 28, 29ರಂದು ಒಡಿಶಾದ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಿಂದ 'ಪ್ರಳಯ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನಡೆಸಲಾಯಿತು
- ಡ್ರೋನ್ ದಾಳಿ ಮೂಲಕ ನಡೆಸಬಹುದಾದ ನಿಖರ ನಿರ್ದೇಶಿತ ಕ್ಷಿಪಣಿ (ಯುಎಲ್‌ಪಿಜಿಎಂ–ವಿ3) ಪ್ರಯೋಗ ಜುಲೈ 25ರಂದು ಯಶಸ್ವಿಯಾಯಿತು
- ಡಿಆರ್‌ಡಿಒ ವಿನ್ಯಾಸಗೊಳಿಸಿದ ದೇಶೀಯ ತಂತ್ರಜ್ಞಾನದಲ್ಲಿ ವಿನ್ಯಾಸಗೊಳಿಸಿದ 'ಎಂಕೆ-II' ಯಂತ್ರವನ್ನು ಆಗಸ್ಟ್ 11ರಂದು ಸೇನೆಗೆ ಸೇರ್ಪಡೆಗೊಳಿಸಲಾಯಿತು. ಸ್ಫೋಟಕ ಅಡಗಿಸಿಟ್ಟ ಪ್ರದೇಶಗಳ ಯಾಂತ್ರಿಕ ಗುರುತು ಮಾಡುವ ಈ ಸಾಧನ ಸೇನಾ ಕಾರ್ಯಾಚರಣೆಗಳ ಕಾರ್ಯಕ್ಷಮತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ
- ಯುದ್ಧ ವಿಮಾನ ಚಾಲನೆಯಲ್ಲಿರುವಾಗ ಆಮ್ಲಜನಕ ಉತ್ಪತ್ತಿ ಮಾಡಿ, ಪೈಲಟ್‌ಗಳಿಗೆ ಪೂರೈಸುವ ಸಾಧನವೊಂದನ್ನು ಡಿಆರ್‌ಡಿಒ ಅಭಿವೃದ್ಧಿಪಡಿಸಿತು. ಭೂಮಟ್ಟದಿಂದ ಅತಿ ಅತ್ತರದಲ್ಲಿ ಹಾರಾಡುವ ತೇಜಸ್‌ನಂತಹ ಲಘು ಯುದ್ಧ ವಿಮಾನದ ಪೈಲಟ್‌ಗಳಿಗೆ ಜೀವ ರಕ್ಷಕ ಆಮ್ಲಜನಕ ವ್ಯವಸ್ಥೆಯನ್ನು ಪೂರೈಸುವ ಸಾಧನ ಇದು

**ಪದಬಂಧ 6268** — ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ನಲ್ವತ್ತೆಂಟನೆಯ ಸಂವತ್ಸರ ಸಂತೋಷವನ್ನೂ ತಂದಿದೆ (3)
5.ಹಸನ್ಮುಖ ವದನವಿದು (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8.ಜರಿಯದಿರಿ! ಇದು ಮುಸಲ್ಮಾನರ ಕಾಲಗಣನೆ! (3)
11.ಕುದುರೆಯನ್ನೇರುವ ಬಳೆ (3)
13.ಮಣಿ ಧರಿಸಿರುವ ಸೂರ್ಯ! (4)
17.ದೇಶದಿಂದ ಹೊರಗೆ ಹಾಕುವುದು (4)
18.ಕೆಟ್ಟ ಹಂಚಿಕೆಯಿಲ್ಲಿ ಉಲ್ಟಾ ಆಗಿದೆ (3)

**ಮೇಲಿಂದ ಕೆಳಕ್ಕೆ**

1.ದೇವೋಭವ ಎನಿಸಿಕೊಳುವ ಗುರು (3)
2.ಈತ ದನಗಳನ್ನು ಕಾಯುವವನು (4)
3.ಗರ ಬಡಿದಿರುವ ಷಹರು (3)
4.ಕಾವ್ಯದ ನವರಸಗಳಲ್ಲಿ ಇದು ಜಿಗುಪ್ಸೆಯನ್ನುಂಟು ಮಾಡಿದೆ (3)
7.ವರ್ಣದಿಂದಲೇ ವಿಸ್ತಾರವಾದ ನಿರೂಪಣೆ (3)
9.ಪೇರಿ ಕಿತ್ತಾಗಲೇ ಮಾಡಿರುವ ದುರಸ್ತಿ (3)
10.ವಿಷಯದ ಕ್ರಮಬದ್ಧವಾದ ನಿರೂಪಣೆ (3)
12.ಹೇಳಿದುದನ್ನೇ ಮತ್ತೆ ಹೇಳುವುದು (4)
14.ಮುಸಲ್ಮಾನ ದೊರೆ (3)
15.ಗೋ ಜಾತಿಯ ಪ್ರಾಣಿಗಳ ತ್ಯಾಜ್ಯ ಉತ್ಪನ್ನ ಉಲ್ಟಾ ಆಗಿದೆ (3)
16.ತಪರಾಕಿ ನೀಡಿದವನಿಗೆ ಈ ಹೊಗಳಿಕೆ!


Publication Date
29/12/2025

## ❖ ವಿಶ್ವ ಕ್ಯಾಪಿಡ್ ಚೆಸ್: ಭಾರತದ ಅರ್ಜುನ್ ಇರಿಗೇಶಿಗೆ ಮೂರನೇ ಸ್ಥಾನ: ಮ್ಯಾಗ್ನಸ್ ಕಾರ್ಲ್‌ಸನ್‌ಗೆ ಆರನೇ ಬಾರಿ ಕಿರೀಟ

**ಸಂದರ್ಭ: ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಫಿಡೆ ವಿಶ್ವ ಬ್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಆರನೇ ಬಾರಿ 'ರಾಜ'ನಾಗಿ ಮೆರೆದರು. ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಅರ್ಜುನ್ ಇರಿಗೇಶಿ ಮೂರನೇ ಸ್ಥಾನ ಪಡೆದರು.**

- ಮಹಿಳೆಯರ ವಿಭಾಗದಲ್ಲಿ ಅಗ್ರ ಇದರಲ್ಲಿ ಭಾರತದ ಮೂವರು ಸ್ಥಾನ ಗಳಿಸಿದ್ದು ಕಡಿಮೆ ಸಾಧನೆಯೇನೂ ಆಗಿರಲಿಲ್ಲ. ಕಳೆದ ವರ್ಷದ ಚಾಂಪಿಯನ್ ಕೋನೇರು ಹಂಪಿ ಮೂರನೇ ಸ್ಥಾನಗಳಿಸಿದರು.

- ಓಪನ್ ವಿಭಾಗದಲ್ಲಿ ಕಾರ್ಲ್‌ಸನ್ 13 ಸುತ್ತುಗಳಲ್ಲಿ 10.5 ಅಂಕ (19 ಗೆಲುವು, 3 ಡ್ರಾ. 1 ಸೋಲು) ಗಳಿಸಿದರು. ರಷ್ಯಾದ ವ್ಲಾದಿಮಿರ್ ಅರ್ಚೆಮೀವ್ (9.5) ಎರಡನೇ ಸ್ಥಾನ ಗಳಿಸಿದರು. ಇಷ್ಟೇ ಅಂಕ ಗಳಿಸಿದ ಅರ್ಜುನ್ ಮತ್ತು ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್, ಡೊಮಿಂಗೆಝ್ ಪರಝ್ ಲೀನಿಯರ್ ಅವರು ಟೈಬ್ರೇಕ್ ಆಧಾರದಲ್ಲಿ ಕ್ರಮವಾಗಿ ಮೂರು ನಾಲ್ಕು ಮತ್ತು
- ಐದನೇ ಸ್ಥಾನ ಪಡೆದರು. ಅರ್ಜುನ್ ಎಂಟು ಪಂದ್ಯ ಗೆದ್ದು, 3 ಡ್ರಾ ಮಾಡಿಕೊಂಡು, ಎರಡು ಸೋತರು. ಅದರಲ್ಲೂ 11ನೇ ಸುತ್ತಿನ ಸೋಲು ಅವರ ಪ್ರಶಸ್ತಿ ಆಸೆಗೆ ಕಡಿವಾಣ ಹಾಕಿತು. ಒಟ್ಟು 247 ಮಂದಿಕಣದಲ್ಲಿದ್ದರು.
- ಕೋನೇರು ಹಂಪಿ ಮೂರನೇ ಸ್ಥಾನ ಪಡೆಯಬೇಕಾಯಿತು. ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕೈನಾ ಚಾಂಪಿಯನ್ ಮುಕುಟ ಧರಿಸಿದರು. ಅಲೆಕ್ಸಾಂಡ್ರಾ ಮತ್ತು ಚೀನಾದ ಝು ಜಿನೆರ್ ಅವರು 11 ಸುತ್ತಿನ ಬಳಿಕ ತಲಾ 8.5 ಅಂಕ ಗಳಿಸಿದ್ದರು. ಟೈಬ್ರೇಕರ್‌ನಲ್ಲಿ ಅಲೆಕ್ಕಾಂಡಾಗಲುವು ಸಾಧಿಸಿದರು.
- ಭಾರತದ ಸವಿತಾ ಶ್ರೀ, ವೈಶಾಲಿ ರಮೇಶಬಾಬು (ತಲಾ 8 ಅಂಕ) ಅವರು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಗಳಿಸಿದರು. ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್ ಎಂಟನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ 141 ಆಟಗಾರ್ತಿಯರು ಕಣದಲ್ಲಿದ್ದರು.

- **ಅರಾವಳಿ ಪರ್ವತಶ್ರೇಣಿ ಕುರಿತ ಕೇಂದ್ರ ಪರಿಸರ ಸಚಿವಾಲಯದ ವ್ಯಾಖ್ಯೆಯನ್ನು ಅಂಗೀಕರಿಸಿ ನವೆಂಬರ್ 20ರಂದು ತಾನು ನೀಡಿದ ನಿರ್ದೇಶನ ಗಳನ್ನು ಸುಪ್ರೀಂ ಕೋರ್ಟ್ ಅಮಾನತಿನಲ್ಲಿರಿಸಿದೆ.**

- ಭಾರತದ ಮುಖ್ಯ ನ್ಯಾಯಮೂರ್ತಿ ಆಗಸ್ಟಿನ್ ಜಾರ್ಜ್ ಮಸೀಹ್ ಅವರ ರಜಾಕಾಲದ ಪೀಠವು ಈ ವಿಷಯದ ಬಗ್ಗೆ ಅಧ್ಯಯನ ನಡೆಸಲು ತಜ್ಞರನ್ನೊಳ ಗೊಂಡ ಉನ್ನತಾಧಿಕಾರ ಸಮಿತಿ ರಚಿಸಲು ನಿರ್ದೇಶನ ನೀಡಿತು.
- ಹಿಂದೆ ನೀಡಿದ್ದ ತೀರ್ಪನ್ನು ಮರು ಪರಿಶೀಲಿಸಬೇಕೆಂಬ ಬೇಡಿಕೆಗಳು ಬಂದ ಕಾರಣ ಸುಪ್ರೀಂ ಕೋರ್ಟ್ ಈ ವಿಚಾರವನ್ನು ಸ್ವಯಂ ಪ್ರೇರಿತವಾಗಿ ಪರಿಗಣಿಸಿ ಈ ಆದೇಶ ನೀಡಿದೆ.
- ಆರಾವಳಿ ಪರ್ವತಶ್ರೇಣಿ ಬಗೆಗಿನ ವಿಚಾರದಲ್ಲಿ ಇನ್ನಷ್ಟು ಸ್ಪಷ್ಟತೆಯ ಅಗತ್ಯವಿದೆ ಎಂದು ಹೇಳಿದ ಪೀಠ, ಕೇಂದ್ರ ಸರ್ಕಾರ ಮತ್ತು ಸಂಬಂಧಪಟ್ಟ ಇತರರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಜನವರಿ 21ಕ್ಕೆ ಮುಂದೂಡಿತು.
- ಅರಾವಳಿ ಪರ್ವತಶ್ರೇಣಿ ಕುರಿತಾದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಸಮಿತಿ ನೀಡಿದ್ದ ಎಲ್ಲೆಡೆಯೂ ಏಕರೂಪದಲ್ಲಿ ಅನ್ವಯ ಆಗುತ್ತಿದ್ದ ವ್ಯಾಖ್ಯಾನವನ್ನು ಸುಪ್ರೀಂ ಕೋರ್ಟ್ ನವೆಂಬರ್ 20ರಂದು ಅನುಮೋದಿಸಿತ್ತು. ಆದರೆ, ತಜ್ಞರ ವರದಿ ಬರುವವರೆಗೂ ಹರಿಯಾಣ. ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಲ್ಲಿ ಹೊಸದಾಗಿ ಗಣಿಗಾರಿಕೆ ಕೈಗೊಳ್ಳಲು ಅನುಮತಿ ನೀಡುವುದಕ್ಕೆ ನಿರ್ಬಂಧ ಹೇರಿತ್ತು.
- ರಾಜಸ್ಥಾನ, ಗುಜರಾತ್, ಹರಿಯಾಣದ ಅರಾವಳಿ ಜಿಲ್ಲೆಗಳಲ್ಲಿನ ನೂರು ಮೀಟರ್ ಮತ್ತು ಅದಕ್ಕಿಂತ ಎತ್ತರದ ಭೂಪ್ರದೇಶಗಳನ್ನು ಅರಾವಳಿ ಬೆಟ್ಟಗಳು ಮತ್ತು 500 ಮೀಟರ್ ಅಂತರದಲ್ಲಿರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಬೆಟ್ಟಗಳನ್ನು ಅರಾವಳಿ ಶ್ರೇಣಿಗಳೆಂದು ಪರಿಗಣಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು.
- ಪರಿಸರ ಸಚಿವಾಲಯದ ವ್ಯಾಖ್ಯಾನವನ್ನು ರಾಜಸ್ಥಾನ ಮತ್ತು ಹರಿಯಾಣದಲ್ಲಿ ವ್ಯಾಪಕ ಪ್ರತಿಭಟನೆಗೆ ಕಾರಣವಾಗಿದೆ. ಅರಾವಳಿ ವ್ಯಾಪ್ತಿಯ ನೂರು ಮೀಟರ್‌ಗಿಂತ ಕಡಿಮೆ ಎತ್ತರದ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಮಾನವ ಹಸ್ತಕ್ಷೇಪ ನಡೆದು ಪರಿಸರಕ್ಕೆ ಹಾನಿಯಾಗುತ್ತದೆ ಎಂಬ ಆಕ್ಷೇಪ

**<u>ನ್ಯಾಯಪೀಠ ಹೇಳಿದ್ದು...</u>**

- ನೂರು ಮೀಟರ್ ಅಥವಾ ಇನ್ನೂ ಎತ್ತರದ ಭೂರಚನೆಗಳನ್ನಷ್ಟೇ ಆರಾವಳಿ ಶ್ರೇಣಿಯಲ್ಲಿನ ಸಂರಕ್ಷಿತ ಪ್ರದೇಶಗಳಾಗಿ ಗುರುತಿಸಬಹುದು.
- ಸಮಿತಿಯ ಹಿಂದಿನ ವರದಿಯು 'ಕೆಲವು ನಿರ್ಣಾಯಕ ವಿಷಯ ಗಳ ಬಗ್ಗೆ ಸ್ಪಷ್ಟ ನಿರ್ಧಾರ' ತೆಗೆದುಕೊಳ್ಳಲು ವಿಫಲವಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. 'ಅಂತಹ ವಿಷಯಗಳ ಬಗ್ಗೆ ಹೆಚ್ಚಿನ ಅಧ್ಯಯನ'ದ ಅಗತ್ಯವಿದೆ ಅರಾವಳಿ ಪ್ರದೇಶದ ಪರಿಸರ ಸಮಗ್ರತೆಗೆ ಧಕ್ಕೆ ಉಂಟುಮಾಡುವ ಯಾವುದೇ ಲೋಪವು ಕಾನೂನಿನಲ್ಲಿ ಇಲ್ಲದಂತೆ ನೋಡಿಕೊಳ್ಳಬೇಕಿದೆ ಹೊಸ ವ್ಯಾಖ್ಯಾನ ಮತ್ತು ಈ ನ್ಯಾಯಾಲಯದ ನಿರ್ದೇಶನ ಗಳನ್ನು ತಪ್ಪಾಗಿ ಅರ್ಥೈಸುವ, ಅಸಮರ್ಪಕ ಅನುಷ್ಠಾನದ ಸಂಭಾವ್ಯದ ಬಗ್ಗೆ ಪರಿಸರವಾದಿ ಗಳಲ್ಲಿ ಆಕ್ರೋಶವಿದೆ ಸಾಂಪ್ರದಾಯಿಕವಾಗಿ ನಿರ್ಮಿಸಲಾದ 'ಐಎನ್‌ಎಸ್‌ವಿ ಕೌಂಡಿನ್ಯ'ವು ತನ್ನ ಚೊಚ್ಚಲ ಸಮುದ್ರಯಾನವನ್ನು ಗುಜರಾತ್‌ನ ಪೋರಬಂದರ್‌ನಿಂದ ಸೋಮವಾರ ಆರಂಭಿಸಿತು. ಅಜಂತಾ ಗುಹೆಗಳಲ್ಲಿದ್ದ ಪೇಂಟಿಂಗ್‌ನಿಂದ ಸ್ಫೂರ್ತಿ ಪಡೆದು, ಐದನೇ ಶತಮಾನದಲ್ಲಿ ಬಳಸುತ್ತಿದ್ದ ಹಡಗನ್ನು ಪುನರ್ ನಿರ್ಮಿಸಲಾಗಿದೆ.
- ಭಾರತದ ಮೊದಲ ನಾವಿಕರಾದ 'ಕೌಂಡಿನ್ಯ' ಅವರ ಹೆಸರನ್ನೇ ಈ ನೌಕೆಗೆ ಇಡಲಾಗಿದೆ. ಪುರಾತನ ಕಾಲದಲ್ಲಿ ಭಾರತದಿಂದ ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಇದೇ ಮಾದರಿಯ ಹಡಗಿನ ಮೂಲಕ ಪ್ರಯಾಣಿಸಿದ್ದ ನೆನಪಿಗಾಗಿ ಇದನ್ನು ನಿರ್ಮಿಸಲಾಗಿದ್ದು, ಸಮುದ್ರಯಾನದ ಇತಿಹಾಸದಲ್ಲಿ ಭಾರತದ ಮೈಲಿಗಲ್ಲನ್ನು ಮತ್ತೆ ನೆನಪಿಸಿದೆ.

- 'ಇದರ ವಿನ್ಯಾಸ ಹಾಗೂ ನಿರ್ಮಾಣದ ವೇಳೆ ವಿಶಿಷ್ಟವಾದ ತಾಂತ್ರಿಕ ಸವಾಲುಗಳು ಎದುರಾದವು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.
- ಕಾರವಾರದ ನೌಕಾನೆಲೆಯಲ್ಲಿ ಕೇಂದ್ರ ಸಾಂಸ್ಕೃತಿಕ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ವರ್ಷ ಮೇ 21ರಂದು ಅಧಿಕೃತವಾಗಿ ಭಾರತೀಯ ಸೇನೆಗೆ ಸೇರ್ಪಡೆಗೊಳಿಸಲಾಗಿತ್ತು.

## ❖ ಯಾನಕ್ಕೆ ನೌಕಾಪಡೆ ಪಶ್ಚಿಮ ಕಮಾಂಡ್ ಮುಖ್ಯಸ್ಥ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್, ಭಾರತದಲ್ಲಿ ಒಮಾನ್ ರಾಯಭಾರಿ ಇಸ್ಸಾ-ಸಲೇ-ಆಲ್ ಶಿಬಾನಿ ಅವರು ಚಾಲನೆ ನೀಡಿದರು.

- 18 ಮಂದಿ ನಾವಿಕರೊಂದಿಗೆ ಈ ಹಡಗು 1,400 ಕಿ.ಮೀ ಅಂತರವನ್ನು 15 ದಿನದಲ್ಲಿ ಕ್ರಮಿಸಿ ಒಮಾನ್‌ನ ಮಸ್ಕತ್‌ಗೆ ತಲುಪಲಿದೆ.
- 'ಈ ಯಾನವು ಭಾರತದ ಪಶ್ಚಿಮ ಕರಾವಳಿಯಿಂದ ಒಮಾನ್‌ಗೆ ಪ್ರಾಚೀನ ಸಮುದ್ರಮಾರ್ಗವನ್ನು ಮತ್ತೆ ನೆನಪಿಸುತ್ತದೆ. ಹಿಂದೂ ಮಹಾಸಾಗರದಲ್ಲಿ ವ್ಯಾಪಾರ, ಸಾಂಸ್ಕೃತಿಕ ವಿನಿಮಯ, ನಿರಂತರ ನಾಗರಿಕ ಸಂವಹನವನ್ನು ಮತ್ತೆ ಪುನರ್ ಸ್ಥಾಪಿಸಲಿದೆ' ಎಂದು ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ.
- ಪುರಾತನ ತಂತ್ರಜ್ಞಾನ ಬಳಸಿಕೊಂಡು, ಈ ಹಡಗಿನ ನಿರ್ಮಾಣ ಮಾಡುವ ಸಂಬಂಧ ಕೇಂದ್ರ
- ಸಾಂಸ್ಕೃತಿಕ ಸಚಿವ, ಭಾರತೀಯ ನೌಕಾ ಪಡೆ ಹಾಗೂ ಹೋದಿ ಇನೋವೇಶನ್ಸ್ ಪ್ರೈವೆಟ್ ಲಿಮಿಟೆಡ್ ಜಂಟಿಯಾಗಿ ಒಪ್ಪಂದಕ್ಕೆ ಸಹಿ ಹಾಕಿತ್ತು. ಕೇಂದ್ರ ಸಾಂಸ್ಕೃತಿಕ ಸಚಿವಾಲಯವು ಈ ಯೋಜನೆಗೆ ಅನುದಾನ ಒದಗಿಸಿತ್ತು.
- 'ಐಎನ್‌ಎಸ್‌ವಿ ಕೌಂಡಿನ್ಯದ ರಚನೆಯು ಹೊಲಿಗೆ ಆಧಾರಿತವಾಗಿದ್ದು ಅಜಂತಾ ಗುಹೆಗಳಲ್ಲಿನ ಪೇಟಿಂಗ್ ನಿಂದ ಸ್ಫೂರ್ತಿ ಪಡೆದುಕೊಂಡು ರಚಿಸಲಾಗಿದೆ' ಎಂದು ನೌಕಾಪಡೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

## ❖ ಕೈಗಾರಿಕಾ ಉತ್ಪಾದನೆ ದಾಖಲೆ ಮಟ್ಟಕ್ಕೆ

- ದೇಶದ ಕೈಗಾರಿಕಾ ವಲಯದ ಬೆಳವಣಿಗೆ ಪ್ರಮಾಣವು ನವೆಂಬರ್ ತಿಂಗಳಲ್ಲಿ ಶೇಕಡ 6.7ರಷ್ಟಾಗಿದೆ. ಇದು ಎರಡು ವರ್ಷಗಳ ಗರಿಷ್ಠ ಮಟ್ಟ, ತಯಾರಿಕೆ, ಗಣಿಗಾರಿಕೆ ವಲಯಗಳಲ್ಲಿ ಹೆಚ್ಚಿನ ಚಟುವಟಿಕೆಗಳು ಕಂಡುಬಂದಿದ್ದು ಈ ಪ್ರಮಾಣದ ಬೆಳವಣಿಗೆಗೆ ನೆರವಾಗಿದೆ.
- ಕೈಗಾರಿಕಾ ಉತ್ಪಾದನೆ ಸೂಚ್ಯಂಕದ (ಐಐಪಿ) ಆಧಾರಲ್ಲಿ ಹೇಳುವ ಕೈಗಾರಿಕಾ ಉತ್ಪಾದನೆ ಪ್ರಮಾಣವು ಹಿಂದಿನ ವರ್ಷದ ನವೆಂಬರ್‌ನಲ್ಲಿ ಶೇ 5ರಷ್ಟು ಬೆಳವಣಿಗೆ 2023ರ ನವೆಂಬರ್‌ನಲ್ಲಿ ಕೈಗಾರಿಕಾ ಬೆಳವಣಿಗೆ ಪ್ರಮಾಣವು ಶೇ 11.9ರಷ್ಟಾಗಿತ್ತು. ಅದಾದ ನಂತರದ ಅತಿಹೆಚ್ಚಿನ ಬೆಳವಣಿಗೆ ಪ್ರಮಾಣವು ಈ ಬಾರಿಯ ನವೆಂಬರ್‌ನಲ್ಲಿ ದಾಖಲಾಗಿದೆ.
- ICRA ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಅವರು, 'ಡಿಸೆಂಬರ್‌ನಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಳ ಕಂಡಿದೆ. ಇದರಿಂದಾಗಿ ಈ ತಿಂಗಳಲ್ಲಿ ವಿದ್ಯುತ್ ಉತ್ಪಾದನೆಯೂ ಹೆಚ್ಚಳ ಕಾಣಲಿದೆ. ಇದು ಡಿಸೆಂಬರ್‌ನಲ್ಲಿಯೂ ಕೈಗಾರಿಕಾ ಬೆಳವಣಿಗೆಗೆ ಪೂರಕ ಎಂದು ಹೇಳಿದ್ದಾರೆ.
- ಅಕ್ಟೋಬರ್‌ನ ಕೈಗಾರಿಕಾ ಬೆಳವಣಿಗೆ ಪ್ರಮಾಣವನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಪರಿಷ್ಕರಿಸಿದ್ದು, ಅದು ಶೇ 0.5 ಎಂದು ಹೇಳಿದೆ. ಕಳೆದ ತಿಂಗಳು ಈ ದತ್ತಾಂಶ ಬಿಡುಗಡೆ ಮಾಡುವಾಗ ಎನ್ ಎಸ್‌ಒ, ಬೆಳವಣಿಗೆ ಪ್ರಮಾಣ ಶೇ0.4ರಷ್ಟಿದೆ ಎಂದು ತಿಳಿಸಿತ್ತು.
- 'ತಯಾರಿಕಾ ವಲಯದಲ್ಲಿ ಕಂಡುಬಂದ ಶೇ. 8ರಷ್ಟು ಬೆಳವಣಿಗೆಯ ಪರಿಣಾಮವಾಗಿ ಕೈಗಾರಿಕಾ ಚಟುವಟಿಕೆಗಳ ಬೆಳವಣಿಗೆ ನವೆಂಬರ್‌ನಲ್ಲಿ ಶೇ 6.7 ರಷ್ಟಾಗಿದೆ' ಎಂದು ಎನ್‌ಎಸ್‌ಒ ಪ್ರಕಟಣೆ ಹೇಳಿದೆ.'

## ❖ ಸರ್ಕಾರಕ್ಕೆ 'ಲಕ ಶೀರ್ಷಿಕೆ'ಗಳ ಭಾರ: ಕರ್ನಾಟಕ ಆಡಳಿತ ಸುಧಾರಣಾ ಆಯೋಗ -2 ಅಂತಿಮ ವರದಿ ಸಲ್ಲಿಕೆ

**ಸಂದರ್ಭ: ವಿವಿಧ ಯೋಜನೆಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರ 2,874 ಲೆಕ್ಕ ಶೀರ್ಷಿಕೆ (ಖಾತೆ) ಹೊಂದಿದ್ದು, ಅವುಗಳಲ್ಲಿ ಶೂನ್ಯ, ಅತ್ಯಲ್ಪ ಹಂಚಿಕೆ ಇರುವ 1,000 ಲೆಕ್ಕ ಶೀರ್ಷಿಕೆಗಳನ್ನು ಆರು ತಿಂಗಳ ಒಳಗೆ ರದ್ದು ಮಾಡಲು ಅಥವಾ ವಿಲೀನಗೊಳಿಸಲು ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2 ಶಿಫಾರಸು ಮಾಡಿದೆ.**

- **ಆರ್.ವಿ.ದೇಶಪಾಂಡೆ ಅಧ್ಯಕ್ಷತೆಯ ಆಯೋಗವು ಆಡಳಿತ ಸುಧಾರಣೆಗಾಗಿ 355 ಶಿಫಾರಸುಗಳನ್ನು ಒಳಗೊಂಡ ತನ್ನ 10ನೇ ಹಾಗೂ ಕೊನೆಯ ವರದಿಯನ್ನು** ಮುಖ್ಯಮಂತ್ರಿ ಅವರಿಗೆ ಸಲ್ಲಿಸಿತು.
- **<u>ಅನಗತ್ಯ ಲೆಕ್ಕ ಶೀರ್ಷಿಕೆಗಳು</u>** ರಾಜ್ಯದ ಹಣಕಾಸು ನಿರ್ವಹಣೆಗೆ ಭಾರವಾಗಿವೆ. 280 ಶೀರ್ಷಿಕೆಗಳು ₹1 ಕೋಟಿಗಿಂತ ಕಡಿಮೆ ಮೊತ್ತದ ಹಂಚಿಕೆ ಹೊಂದಿವೆ. ಕಂದಾಯ, ಗ್ರಾಮೀಣಾ ಭಿವೃದ್ಧಿ ಇಲಾಖೆಯಲ್ಲಿ ತಲಾ 36, ಲೋಕೋಪಯೋಗಿ ಇಲಾಖೆಯಲ್ಲಿ 34, ಆರ್ಥಿಕ ಇಲಾಖೆಯಲ್ಲಿ 33, ಸಾರಿಗೆ ಇಲಾಖೆಯಲ್ಲಿ 30, ಶಾಲಾ ಶಿಕ್ಷಣ ಇಲಾಖೆಯಲ್ಲಿ 29, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆಯಲ್ಲಿ ತಲಾ 28 ಸೇರಿದಂತೆ ಹಲವು ಶೀರ್ಷಿಕೆಗಳ ಅಡಳಿತಾತ್ಮಕ ವೆಚ್ಚ ಶೇಕಡ 35 ದಾಟಿದೆ. ಸಾಲ ಮರುಪಾವತಿ ಗಾಗಿಯೇ 396 ಲೆಕ್ಕ ಶೀರ್ಷಿಕೆಗಳಿದ್ದು, ಇಂತಹ ಎಲ್ಲ ಶೀರ್ಷಿಕೆಗಳನ್ನು ರದ್ದು ಮಾಡಬೇಕು. ಸಾಮ್ಯತೆ ಇರುವ ಕಡೆ ವಿಲೀನಗೊಳಿಸಬೇಕು ಎಂಬ ಶಿಫಾರಸು ವರದಿಯಲ್ಲಿದೆ.



ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಅವರು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಅಂತಿಮ ವರದಿಯನ್ನು ಮಂಗಳವಾರ ಸಲ್ಲಿಸಿದರು

### ನೇಮಕಾತಿ ನಿಯಮಕ್ಕೆ ತಿದ್ದುಪಡಿ

ಯಾವುದೇ ಇಲಾಖೆ, ನಿಗಮ-ಮಂಡಳಿಗಳ ಹುದ್ದೆಗಳನ್ನು ಭರ್ತಿ ಮಾಡುವಾಗ ಕೆಲಸದ ಸ್ವರೂಪ, ಕಾರ್ಯಭಾರ ಖಚಿತಪಡಿಸಿಕೊಳ್ಳಬೇಕು. ನಂತರ ಜಿಲ್ಲಾವಾರು ಜನಸಂಖ್ಯೆ, ಕೆಲಸಗಳ ಆಧಾರದಲ್ಲಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕು ಎಂದು ಆಯೋಗ ಹೇಳಿದೆ.

ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ ಹಿಂದೆ ಮಂಜೂರಾದ ಹುದ್ದೆಗಳನ್ನು ಪರಿಗಣಿಸಬಾರದು. ರಾಜ್ಯದ ವಿವಿಧ ಇಲಾಖೆಗಳಲ್ಲಿ ಮಂಜೂರಾದ 8.16 ಲಕ್ಷ ಹುದ್ದೆಗಳು ಇದ್ದು, 2.94 ಲಕ್ಷ ಖಾಲಿ ಇವೆ. ಪ್ರಸ್ತುತ ಸನ್ನಿವೇಶ, ಬದಲಾದ ಕೆಲಸದ ಸ್ವರೂಪ, ಅಗತ್ಯವನ್ನು ಲೆಕ್ಕಹಾಕಿಕೊಂಡು ನೇಮಕಾತಿ ಮಾಡಿಕೊಳ್ಳಬೇಕು. ಹೆಚ್ಚುವರಿ ಹುದ್ದೆಗಳು ಇದ್ದರೆ ಅಗತ್ಯವಿರುವ ಇತರೆ ಕಡೆಗೆ ಮರು ಹಂಚಿಕೆ ಮಾಡಬೇಕು. ಹೆಚ್ಚುವರಿ ಹುದ್ದೆಗಳ ಅಗತ್ಯವಿದ್ದರೆ ಆರ್ಥಿಕ ಇಲಾಖೆಯ ಅನುಮತಿ ಪಡೆದು ಭರ್ತಿ ಮಾಡಿಕೊಳ್ಳಬೇಕು. ಅದಕ್ಕಾಗಿ ಎಲ್ಲ ಇಲಾಖೆಗಳೂ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಸಮಗ್ರ ತಿದ್ದುಪಡಿ ತರಬೇಕು. ಇಲಾಖೆಗಳ ಮಧ್ಯೆ ಮರು ಹಂಚಿಕೆಯನ್ನು ಕಡ್ಡಾಯ ಮಾಡಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಿ ಮತ್ತು ಡಿ ಗುಂಪಿನ ಹುದ್ದೆಗಳಿಗೆ ಹೊರಗುತ್ತಿಗೆ ನೇಮಕಾತಿಯನ್ನು ಪಾರದರ್ಶಕವಾಗಿ ಮಾಡಬೇಕು. ಕಾಯಂ ನೇಮಕಕ್ಕೆ ಆದ್ಯತೆ ನೀಡಬೇಕು. 70 ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ಸಿಬ್ಬಂದಿ ಇದ್ದು, ಹಂತಹಂತವಾಗಿ ಹೊರಗುತ್ತಿಗೆ ನೇಮಕವನ್ನು ಕೈಬಿಡಬೇಕು ಎಂದು ಶಿಫಾರಸು ಮಾಡಿದೆ.

### ಅವಧಿ ಮುಕ್ತಾಯ, ಮೇಲ್ವಿಚಾರಣೆಗೆ ಘಟಕ

ಐದು ವರ್ಷಗಳ ಅವಧಿಯಲ್ಲಿ ಸಿದ್ಧಪಡಿಸಿರುವ 10 ವರದಿಗಳಲ್ಲಿ ಮಾಡಿರುವ ಎಲ್ಲ ಶಿಫಾರಸುಗಳನ್ನು ಅನುಷ್ಠಾನಗೊಳಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ 'ಸುಧಾರಣಾ ಮೇಲ್ವಿಚಾರಣಾ ಘಟಕ (ಆರ್‌ಎಂಯು)' ಸ್ಥಾಪಿಸುವಂತೆ ಆಯೋಗ ಶಿಫಾರಸು ಮಾಡಿದೆ.

ಆಡಳಿತ ಸುಧಾರಣಾ ಆಯೋಗ-2ರ ಅವಧಿ ಮುಕ್ತಾಯವಾಗಿದ್ದು, ಆಯೋಗವನ್ನು ವಿಸರ್ಜನೆ ಮಾಡುತ್ತಿರುವ ಕಾರಣ ಶಿಫಾರಸುಗಳ ಅನುಷ್ಠಾನಕ್ಕೆ ಆರ್‌ಎಂಯು ಅಗತ್ಯವಿದೆ. ಶಿಫಾರಸುಗಳ ಅನುಷ್ಠಾನ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಸಭೆ, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ವರ್ಷಕ್ಕೆ ಒಮ್ಮೆ ಪ್ರಗತಿ ಪರಿಶೀಲನೆ ನಡೆಸಬೇಕು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಆನ್‌ಲೈನ್ ಟ್ರ್ಯಾಕಿಂಗ್ ಮೂಲಕ ಪಾರದರ್ಶಕ ಮೇಲ್ವಿಚಾರಣೆ ಮಾಡಬೇಕು ಎಂದು ಹೇಳಿದೆ.

- **<u>ಸಾಮಾಜಿಕ ಭದ್ರತಾ ಯೋಜನೆಗಳೂ ಸೇರಿದಂತೆ ಕೇಂದ್ರ ಪುರಸ್ಕೃತ ಯೋಜನೆ ಗಳ ಜತೆ ಹೆಚ್ಚಿನ ಸಾಮ್ಯತೆ ಹೊಂದಿರುವ ಯೋಜನೆಗಳನ್ನು ವಿಲೀನಗೊಳಿಸುವ</u>** ಮೂಲಕ ಮರು ಜೋಡಣೆ ಮಾಡಬೇಕು. ಹಳೆಯ ಯೋಜನೆಗಳನ್ನು ಸ್ಥಗಿತಗೊಳಿಸ ಬೇಕು ಎಂದು ಹೇಳಿದೆ. 2023-24ನೇ ಸಾಲಿನ ವೆಚ್ಚ, 2024-25ನೇ ಸಾಲಿನ ಪರಿಷ್ಕೃತ ಅಂದಾಜು ಹಾಗೂ 2025-26ನೇ ಸಾಲಿನ ಬಜೆಟ್ ಅಂದಾಜುಗಳ ಆಧಾರದಲ್ಲಿ ನಿಷ್ಕ್ರಿಯವಾಗಿರುವ ಖಾತೆಗಳನ್ನು ಲೆಕ್ಕ ಹಾಕಿ, ಆಯೋಗ ಶಿಫಾರಸುಮಾಡಿದೆ.
- **<u>ಅನುಪಯುಕ್ತ ಲೆಕ್ಕ ಶೀರ್ಷಿಕೆಗಳನ್ನು ರದ್ದು ಮಾಡುವುದರಿಂದ</u>** ಬಜೆಟ್ ತಯಾರಿ, ಅನುದಾನ ಬಿಡುಗಡೆ, ವೆಚ್ಚದಲ್ಲಿ ಸ್ಪಷ್ಟತೆ ಸಿಗುತ್ತದೆ. ಮೇಲ್ವಿಚಾರಣೆ ಸುಲಭವಾಗುತ್ತದೆ. ಕಾರ್ಯಕ್ಷಮತೆ ಸುಧಾರಿಸುತ್ತದೆ. ಲೋಪದೋಷಗಳು, ಆಡಳಿತಾತ್ಮಕ ಹೊರೆ ಕಡಿಮೆಯಾ ಗುತ್ತದೆ. ಮುಂದಿನ ಆರ್ಥಿಕ ವರ್ಷಗಳಲ್ಲಿ ನಿಷ್ಕ್ರಿಯ ಲೆಕ್ಕ ಶೀರ್ಷಿಕೆಗಳು ತಗ್ಗುತ್ತವೆ. ಸರಳೀಕೃತ ಲೆಕ್ಕಾಚಾರದ ಚೌಕಟ್ಟು → ಸಿದ್ಧವಾಗುತ್ತದೆ. ರಾಜ್ಯ ಹಾಗೂ ಜಿಲ್ಲಾಮಟ್ಟ ದಲ್ಲಿ ಪರಿಣಾಮಕಾರಿ ಹಣಕಾಸಿನ ನಿರ್ವಹಣೆ ಸಾಧ್ಯವಾಗಲಿದೆ ಎಂದು ವಿವರಿಸಿದೆ.

- **ವಾರ್ಷಿಕ ನೇಮಕಾತಿ ಕಡ್ಡಾಯ:** ವಿವಿಧ ಇಲಾಖೆ ಮತ್ತು ನಿಗಮ, ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಆಯಾ ವರ್ಷವೇ ಭರ್ತಿ ಮಾಡುವ ನಿಯಮ ರೂಪಿಸಬೇಕು. ನಗರಾಭಿವೃದ್ಧಿ, ಕಂದಾಯ, ಗ್ರಾಮೀಣಾಭಿವೃದ್ಧಿ, ಆರೋಗ್ಯ ಇಲಾಖೆಗಳಲ್ಲಿ ಅಧಿಕಾರಿಗಳು, ಸಿಬ್ಬಂದಿ ಕೊರತೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಪಡಿಸಬೇಕು ಎಂಬ ಶಿಫಾರಸುಗಳೂ ವರದಿಯಲ್ಲಿವೆ.

## ❖ ತ್ವರಿತ ತೀರ್ಪು: 'ಸುಪ್ರೀಂ' ಎಸ್‌ಒಪಿ

**ಸಂದರ್ಭ: ವಾದ ಮಂಡನೆ ಮತ್ತು ಲಿಖಿತ ಟಿಪ್ಪಣಿ ಸಲ್ಲಿಕೆಗೆ ವಕೀಲರು ವೇಳಾಪಟ್ಟಿ ನಿಗದಿಪಡಿಸಿ, ಈ ವೇಳಾಪಟ್ಟಿಗೆ ಅವರು ಬದ್ಧರಾಗಿರುವುದಕ್ಕಾಗಿ ಸುಪ್ರೀಂ ಕೋರ್ಟ್ ಹೊಸ ಪ್ರಮಾಣಿತ ಕಾರ್ಯಾಚರಣೆ ವಿಧಾನ ವನ್ನು (ಎಸ್‌ಒಪಿ) ಪ್ರಕಟಿಸಿದೆ.**

- ಕಾರ್ಯ ನ್ಯಾಯಾಲಯಗಳ ನಿರ್ವಹಣೆಯಲ್ಲಿ ಸುಧಾರಣೆ ತರುವುದು ಮತ್ತು ನ್ಯಾಯದಾನ ಪ್ರಕ್ರಿಯೆ ತ್ವರಿತಗೊ ಳಿಸುವ ಗುರಿಯನ್ನು ಈ ಕ್ರಮ ಹೊಂದಿದೆ. ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನಿರ್ದೇಶನದ ಮೇರೆಗೆ ಡಿಸೆಂಬರ್ 29ರಂದು ಈ ಸುತ್ತೋಲೆ ಹೊರಡಿಸಲಾಗಿದೆ.
- 'ವಿವಿಧ ಪ್ರಕರಣಗಳಲ್ಲಿ ವಾದಿಸುವ ಹಿರಿಯ ವಕೀಲರು, ವಕೀಲರು ಅಥವಾ ಎಒಆರ್‌ಗಳು (ಅಡ್ವಕೇಟ್ ಆನ್ ರೆಕಾರ್ಡ್) ವಾದ ಮಂಡನೆಯ ವೇಳಾಪಟ್ಟಿ ಯನ್ನು ಪ್ರಕರಣದ ವಿಚಾರಣೆ ಪ್ರಾರಂಭವಾಗುವ ಕನಿಷ್ಠ ಒಂದು ದಿನ ಮೊದಲು ಸಲ್ಲಿಸಬೇಕು. ನಿರ್ದಿಷ್ಟ ಪ್ರಕರಣದಲ್ಲಿ ವಾದ ಮಂಡಿಸುವುದಕ್ಕಾಗಿ ಎಒಆರ್‌ಗೆ ಈಗಾಗಲೇ ಒದಗಿಸಲಾದ 'ಹಾಜರಾತಿ ಚೀಟಿ'ಯನ್ನು ವೆಬ್‌ಸೈಟ್ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಎಸ್‌ಪಿ ಹೇಳಿದೆ.
- 'ವೇಳಾಪಟ್ಟಿಯನ್ನು ಮುಂಚಿತವಾಗಿ ನಿಗದಿಪಡಿಸುವುದರ ಜತೆಗೆ ವಾದ ಮಂಡಿಸುವ ವಕೀಲರು ತಮ್ಮ ವಾದದ ಸಂಕ್ಷಿಪ್ತ ವಿವರಗಳನ್ನು ಲಿಖಿತವಾಗಿ (ಐದು ಪುಟಗಳಿಗೆ ಮೀರದಂತೆ) ವಿಚಾರಣೆ ಆರಂಭಕ್ಕೆ ಕನಿಷ್ಠ ಮೂರು ದಿನ ಮುಂಚಿತವಾಗಿ ಕಡ್ಡಾಯವಾಗಿ ಸಲ್ಲಿಸಬೇಕು' ಎಂದಿದೆ. ಹೊಸ ಎಸ್‌ಒಪಿ ತಕ್ಷಣದಿಂದಲೇ ಜಾರಿಗೆ ಬರಲಿದೆ.

## ❖ ಜಪಾನ್ ಹಿಂದಿಕ್ಕಿದ ಭಾರತ

**ಸಂದರ್ಭ: ಭಾರತದ ಅರ್ಥ ವ್ಯವಸ್ಥೆಯು ಜಪಾನ್ ದೇಶದ ಅರ್ಥ ವ್ಯವಸ್ಥೆಯ ಗಾತ್ರವನ್ನು ಹಿಂದಿಕ್ಕಿದ್ದು, 4.18 ಟ್ರಿಲಿಯನ್ ಡಾಲರ್ (ಸರಿಸುಮಾರು 2375 ಲಕ್ಷ ಕೋಟಿ) ಆಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.**

- ಈಗ ಭಾರತದ ಅರ್ಥ ವ್ಯವಸ್ಥೆಯು ವಿಶ್ವದ ನಾಲ್ಕನೆಯ ಅತಿ ದೊಡ್ಡ ಅರ್ಥವ್ಯವಸ್ಥೆ ಎಂದು ಅದು ಹೇಳಿದೆ. ಭಾರತದ ಅರ್ಥ ವ್ಯವಸ್ಥೆಯು ಜರ್ಮನಿಯ ಅರ್ಥ ವ್ಯವಸ್ಥೆಯನ್ನು ಕೂಡ 2030ರ ವೇಳೆಗೆ ಹಿಂದಿಕ್ಕಿ ವಿಶ್ವದ ಮೂರನೆಯ ಅತಿದೊಡ್ಡ ಅರ್ಥವ್ಯವಸ್ಥೆಆಗಲಿದೆ ಎಂದು ತಿಳಿಸಿದೆ.
- ದೇಶದ ಅರ್ಥವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಚೆನ್ನಾಗಿದ್ದು, ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿದೆ ಎಂದು ಕೇಂದ್ರವು ತಿಳಿಸಿದೆ. 2025-26ನೇ ಸಾಲಿನ ಎರಡನೆಯ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 8.2ರಷ್ಟಾಗಿದೆ. ಇದು ಆರು ತ್ರೈಮಾಸಿಕಗಳಲ್ಲಿನ ಅತಿಹೆಚ್ಚಿನ ಬೆಳವಣಿಗೆ. 'ಮುಂದಿನ ಎರಡೂವರೆಯಿಂದ ಮೂರುವರ್ಷಗಳಲ್ಲಿ ಭಾರತದ ಜಿಡಿಪಿ ಗಾತ್ರವು 7.3 ಅಮೆರಿಕನ್ ಡಾಲರ್ (ಸರಿಸುಮಾರು ₹655 ಲಕ್ಷ ಕೋಟಿ) ಆಗುವ ನಿರೀಕ್ಷೆ ಇದೆ' ಎಂದು ಕೇಂದ್ರ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ. ಅಮೆರಿಕವು ವಿಶ್ವದ ಅತಿದೊಡ್ಡ ಅರ್ಥ ವ್ಯವಸ್ಥೆ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಕೇಂದ್ರವು ಪ್ರತಿಪಾದಿಸಿದೆ.
- ಬೇರೆ ಬೇರೆ ಅಂತರರಾಷ್ಟ್ರೀಯ ಸಂಸ್ಥೆಗಳು ಭಾರತದ ಅರ್ಥ ವ್ಯವಸ್ಥೆಯ ಬಗ್ಗೆ ಬಹಳ ಆಶಾವಾದವನ್ನು ವ್ಯಕ್ತಪಡಿಸಿವೆ ಎಂದು ಹೇಳಿರುವ ಕೇಂದ್ರವು, ಅವು ಜಿಡಿಪಿ ಬೆಳವಣಿಗೆಯ ಬಗ್ಗೆ ಸಿದ್ಧಪಡಿಸಿರುವ ಅಂದಾಜುಗಳನ್ನು ಕೂಡ ಉಲ್ಲೇಖಿಸಿದೆ.

- 'ದೇಶಕ್ಕೆ ಸ್ವಾತಂತ್ರ್ಯ ದೊರೆತು ನೂರು ವರ್ಷಗಳಾಗುವ 2047ರ ವೇಳೆಗೆ ದೇಶದ ಜನರು ಹೆಚ್ಚಿನ ಆದಾಯವನ್ನು ಪಡೆಯುವಂತೆ ಆಗಬೇಕು ಎಂಬ ಮಹತ್ವಾಕಾಂಕ್ಷೆಯನ್ನು ದೇಶವು ಸುಧಾರಣೆಗಳನ್ನು, ಸಾಮಾಜಿಕ ಪ್ರಗತಿಯನ್ನು ನೆಚ್ಚಿಕೊಂಡಿದೆ' ಎಂದು ಪ್ರಕಟಣೆಯುವಿವರಿಸಿದೆ. ಸಾಧಿಸಲು ಹಣದುಬ್ಬರ ಪ್ರಮಾಣವು ನಿಗದಿತ ಮಟ್ಟಕ್ಕಿಂತ ಕಡಿಮೆ ಇದೆ, ನಿರುದ್ಯೋಗ ದರವು ಕಡಿಮೆ ಆಗುತ್ತಿದೆ, ರಫ್ತು ಪ್ರಮಾಣ ಸುಧಾರಿಸುತ್ತಿದೆ ಎಂದು ಅದರಲ್ಲಿ ಹೇಳಲಾಗಿದೆ.ಯನ್ನು ಹೊಂದಿದೆ. ಚೀನಾ ಎರಡನೆಯ ಸ್ಥಾನದಲ್ಲಿದೆ.
- ದೇಶದ ಮಾರುಕಟ್ಟೆಯಲ್ಲಿ ಜನಸಾಮಾನ್ಯರಿಂದ ಬೇಡಿಕೆಯು ಹೆಚ್ಚಾಗಿರುವುದು ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಕೇಂದ್ರವು ಪ್ರತಿಪಾದಿಸಿದೆ.
- ಬೇರೆ ಬೇರೆ ಅಂತರರಾಷ್ಟ್ರೀಯ ಸಂಸ್ಥೆಗಳು ಭಾರತದ ಅರ್ಥ ವ್ಯವಸ್ಥೆಯ ಬಗ್ಗೆ ಬಹಳ ಆಶಾವಾದವನ್ನು ವ್ಯಕ್ತಪಡಿಸಿವೆ ಎಂದು ಹೇಳಿರುವ ಕೇಂದ್ರವು, ಅವು ಜಿಡಿಪಿ ಬೆಳವಣಿಗೆಯ ಬಗ್ಗೆ ಸಿದ್ಧಪಡಿಸಿರುವ ಅಂದಾಜುಗಳನ್ನು ಕೂಡ ಉಲ್ಲೇಖಿಸಿದೆ.
- 'ದೇಶಕ್ಕೆ ಸ್ವಾತಂತ್ರ್ಯ ದೊರೆತು ನೂರು ವರ್ಷಗಳಾಗುವ 2047ರ ವೇಳೆಗೆ ದೇಶದ ಜನರು ಹೆಚ್ಚಿನ ಆದಾಯವನ್ನು ಪಡೆಯುವಂತೆ ಆಗಬೇಕು ಎಂಬ ಮಹತ್ವಾಕಾಂಕ್ಷೆಯನ್ನು ದೇಶವು ಸುಧಾರಣೆಗಳನ್ನು, ಸಾಮಾಜಿಕ ಪ್ರಗತಿಯನ್ನು ನೆಚ್ಚಿಕೊಂಡಿದೆ' ಎಂದು ಪ್ರಕಟಣೆಯುವಿವರಿಸಿದೆ. ಸಾಧಿಸಲು ಹಣದುಬ್ಬರ ಪ್ರಮಾಣವು ನಿಗದಿತ ಮಟ್ಟಕ್ಕಿಂತ ಕಡಿಮೆ ಇದೆ, ನಿರುದ್ಯೋಗ ದರವು ಕಡಿಮೆ ಆಗುತ್ತಿದೆ, ರಫ್ತು ಪ್ರಮಾಣ ಸುಧಾರಿಸುತ್ತಿದೆ ಎಂದು ಅದರಲ್ಲಿ ಹೇಳಲಾಗಿದೆ.

## ❖ ಮದ್ರಾಸ್ ವಿ.ವಿ ಮಸೂದೆ ಹಿಂದಿರುಗಿಸಿದ ಮುರ್ಮು


**ಸಂದರ್ಭ: ತಮಿಳುನಾಡು ಮದ್ರಾಸ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ ಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹಿಂದಿರುಗಿಸಿದ್ದಾರೆ ಎಂದು ಮೂಲಗಳು ಹೇಳಿವೆ.**

- ವಿಶ್ವವಿದ್ಯಾಲಯಕ್ಕೆ ಕುಲಪತಿಯನ್ನು ಸಲಹಾರವನ್ನು ರಾಜ್ಯ ಸಾಡುವ ನೀಡುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ.
- ಈ 20220 ಮಸೂದೆಯನ್ನು ಏಪ್ರಿಲ್‌ನಲ್ಲಿ ಅಂಗೀ- ದ್ರೌಪದಿ ವಿಧಾನಸಭೆಯಲ್ಲಿ ಕರಿಸಲಾಗಿತ್ತು. ಮಸೂದೆಗೆ ಮುರ್ಮು ಅಂಕಿತ ಹಾಕಲು ಒಪ್ಪದ ರಾಜ್ಯಪಾಲ ಆರ್.ಎನ್.ರವಿ ಅವರು ರಾಷ್ಟ್ರಪತಿಯವರ ಪರಿಗಣನೆಗಾಗಿ ಈ ಮಸೂದೆಯನ್ನು ಕಳುಹಿಸಿದ್ದರು. ಮರು ಪರಿಶೀಲನೆಗಾಗಿ ಈ ಮಸೂದೆಯನ್ನು ರಾಷ್ಟ್ರಪತಿಯವರು ಇತ್ತೀಚೆಗಷ್ಟೆ ವಿಧಾನಸಭೆಗೆ ಹಿಂದಿರುಗಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- ಪ್ರಸ್ತಾವಿತ ಮಸೂದೆಯು ವಿಶ್ವವಿದ್ಯಾಲಯ ಅನುದಾನ ಅಯೋಗ (ಯುಜಿಸಿ) ನಿಬಂಧನೆಗಳು ಹಾಗೂ ಕುಲಪತಿಗಳ ನೇಮಕಕ್ಕೆ ಸಂಬಂಧಿಸಿದ ನಿಯಮಗಳಿಗೆ ವಿರುದ್ಧವಾಗಿದೆ ಎಂಬ ಕಾರಣ ನೀಡಿ, ಅವರು ಇಂತಹ ಕ್ರಮ ಕೈಗೊಂಡಿದ್ದರು.
- ಮದ್ರಾಸ್ ವಿಶ್ವವಿದ್ಯಾಲಯಕ್ಕೆ 168 ವರ್ಷಗಳ ಇತಿಹಾಸ ಇದೆ. ಕಳೆದ ಎರಡು ವರ್ಷಗಳಿಂದ ವಿ.ವಿ ಕುಲಪತಿ ಹುದ್ದೆ ಖಾಲಿ ಇದೆ. ರಾಜ್ಯಪಾಲರೇ ಈಗ ಪದನಿಮಿತ್ತ ಕುಲಪತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.
- ವಿ.ವಿಗೆ ಕುಲಪತಿ ನೇಮಕ ಮಾಡುವ ಹಾಗೂ ಅವರನ್ನು ತೆಗೆದು ಹಾಕುವ ಅಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯ ಕಾಯ್ದೆಗೆ ತಿದ್ದುಪಡಿ ತಂದು, ರಾಜ್ಯಪಾಲರ ಈ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಬೇಕು ಎಂಬ ಅವಕಾಶವನ್ನು ಈ ತಿದ್ದುಪಡಿ ಮಸೂದೆ ಒಳಗೊಂಡಿದೆ.
- ತಮಿಳುನಾಡಿನಲ್ಲಿರುವ 22 ವಿಶ್ವವಿದ್ಯಾಲಯಗಳ ಪೈಕಿ, ಮದ್ರಾಸ್ ವಿ.ವಿ ಸೇರಿ 14 ವಿ.ವಿಗಳಲ್ಲಿ ಕುಲಪತಿ ಹುದ್ದೆಗಳು ಖಾಲಿ ಇವೆ. ಸಂಚಾಲಕ ಸಮಿತಿಗಳೇ ಈ ವಿ.ವಿಗಳ ಆಡಳಿತದ ಹೊಣೆ ಹೊತ್ತಿವೆ.

## ❖ ವಾಣಿಜ್ಯ ಬಳಕೆಗೆ 'ಧ್ರುವ ಎನ್-ಜೆನ್'

**ಸಂದರ್ಭ: ನಾಗರಿಕ-ವಾಣಿಜ್ಯ ಬಳಕೆ ಗೆಂದೇ ಮಾರ್ಪಾಡು ಮಾಡಲಾದ, ಎಚ್‌ಎಎಲ್‌ನ 'ಧ್ರುವ ಎನ್-ಜೆನ್ (ನ್ಯೂ ಜನರೇಷನ್)' ಹೆಲಿಕಾಪ್ಟರ್ ಅನ್ನು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರು ಅನಾವರಣ ಮಾಡಿ ಹಾರಾಟಕ್ಕೆ ಚಾಲನೆ ನೀಡಿದರು.**

- 2004ರಲ್ಲಿ ಅಭಿವೃದ್ಧಿ ಪಡಿಸಲಾದ ಧ್ರುವ ಹೆಲಿಕಾಪ್ಟರ್‌ನ ಸೇನಾ ಅವತರಣಿಕೆಯನ್ನು ಭಾರತೀಯ ಸೇನೆಯ ಮೂರೂ ಪಡೆಗಳು ಬಳಸುತ್ತಿವೆ. ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಈ ಹೆಲಿಕಾಪ್ಟರ್ ಅನ್ನು ನಾಗರಿಕ ವಾಣಿಜ್ಯ ಬಳಕೆಗೂ ಬಿಡುಗಡೆ ಮಾಡುವ ಗುರಿಯನ್ನು ಎಚ್‌ಎಎಲ್ ಹಾಕಿಕೊಂಡಿದೆ. ಇದರ ಭಾಗವಾಗಿ ಧ್ರುವ್ ಹೆಲಿಕಾಪ್ಟರ್‌ನಲ್ಲಿ ಗಣನೀಯ ಬದಲಾವಣೆಗಳನ್ನು ಮಾಡಿ, 'ಧ್ರುವ ಎನ್-ಜೆನ್' ಅನ್ನು ಎಚ್‌ಎಎಲ್ ರೂಪಿಸಿದೆ.
- 'ಧ್ರುವ ಎನ್-ಜೆನ್' ಅನ್ನು ನಾಗರಿಕ ಬಳಕೆಗೆ ಬಿಡುಗಡೆ ಮಾಡುವುದಕ್ಕೂ ಮುನ್ನ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ), ಹೆಲಿಕಾಪ್ಟರ್‌ಗೆ ಪ್ರಮಾಣಪತ್ರ ನೀಡಬೇಕಿದೆ. ಅದರ ಭಾಗವಾಗಿ ಹೆಲಿಕಾಪ್ಟರ್‌ನ ತಾಂತ್ರಿಕ ವಿವರಗಳು ಮತ್ತು ನಾಗರಿಕ ಬಳಕೆಯ ಸಾಧ್ಯತೆಗಳ ಕುರಿತಾಗಿ ಎಚ್‌ಎಎಲ್, ವಿಮಾನಯಾನ ಸಚಿವರಿಗಾಗಿ ಪ್ರಾತ್ಯಕ್ಷಿಕೆಯನ್ನು ಆಯೋಜಿಸಿತ್ತು.
- ಈ ಹೆಲಿಕಾಪ್ಟರ್‌ನಲ್ಲಿ 'ಶಕ್ತಿ 1ಎಚ್1ಸಿ' ಸರಣಿಯ ಎಂಜಿನ್‌ಗಳನ್ನು ಅವಳಿ ಸಂಯೋಜನೆಯಲ್ಲಿ ಕೂರಿಸಲಾಗಿದೆ. ಈ ಸಂಯೋಜನೆಗೆ ಡಿಜಿಸಿಎಯು ಈಗಾಗಲೇ ಪ್ರಮಾಣಪತ್ರ ನೀಡಿದೆ. ಹೆಲಿಕಾಪ್ಟರ್‌ನಲ್ಲಿ ಇರುವ ಇತರ ಸವಲತ್ತುಗಳ ಬಗ್ಗೆ ಮಾಹಿತಿ ಪಡೆದುಕೊಂಡ ಸಚಿವ ನಾಯ್ಡು ಅವರು, 'ಎರಡು-ಮೂರು ತಿಂಗಳಲ್ಲಿ ಪ್ರಮಾಣಪತ್ರ ಒದಗಿಸಲು ಕ್ರಮವಹಿಸಲಾಗುವುದು' ಎಂದರು.






### 'ಆತ್ಮನಿರ್ಭರ ಭಾರತದ ಹೆಜ್ಜೆ'

'ದೇಶದ ನಾಗರಿಕ- ವಾಣಿಜ್ಯ ಹೆಲಿಕಾಪ್ಟರ್ ಸೇವಾ ಕ್ಷೇತ್ರವು ಅತ್ಯಂತ ಕ್ಷಿಪ್ರವಾಗಿ ಬೆಳೆಯುತ್ತಿದೆ. ಆದರೆ, ಈ ಕ್ಷೇತ್ರದಲ್ಲಿ ರಷ್ಯಾ, ಅಮೆರಿಕ ಮತ್ತು ಐರೋಪ್ಯ ಕಂಪನಿಗಳದ್ದೇ ಏಕಸ್ವಾಮ್ಯ ಇದೆ. ಇದರಲ್ಲಿ ಸ್ವಾವಲಂಬನೆ ಸಾಧಿಸಬೇಕಿದೆ. ಎಚ್‌ಎಎಲ್‌ನ ಈ ಪ್ರಯತ್ನವು ಆತ್ಮನಿರ್ಭರ ಭಾರತದತ್ತ ಮಹತ್ವದ ಹೆಜ್ಜೆಯಾಗಿದೆ' ಎಂದು ಸಚಿವ ಕೆ.ರಾಮಮೋಹನ್ ನಾಯ್ಡು ಹೇಳಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಐದಾರು ರಾಜ್ಯಗಳು, ತೈಲ ಕಂಪನಿಗಳು, ಪ್ರವಾಸೋದ್ಯಮ ಸಂಸ್ಥೆಗಳು ಹೆಲಿಕಾಪ್ಟರ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಖರೀದಿಸುತ್ತಿವೆ. ಧ್ರುವ್ ಎನ್-ಜೆನ್ ನಾಗರಿಕ ಬಳಕೆಗೆ ಲಭ್ಯವಾದರೆ, ಆ ಮಾರುಕಟ್ಟೆಯ ದೊಡ್ಡ ಪಾಲನ್ನು ಪಡೆದುಕೊಳ್ಳಬಹುದು. ಇದಕ್ಕಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ' ಎಂದು ವಿವರಿಸಿದರು.

'ವಿದೇಶಿ ಹೆಲಿಕಾಪ್ಟರ್‌ಗಳ ನಿರ್ವಹಣೆ, ಬಿಡಿಭಾಗಗಳು ದುಬಾರಿ. ಅವುಗಳ ನಿರ್ವಹಣಾ ಕಾರ್ಯಕ್ಕೆ ವಿದೇಶಿಯರನ್ನೇ ಅವಲಂಬಿಸಬೇಕಿದೆ. ಆದರೆ ಧ್ರುವ ಎನ್-ಜೆನ್ ಈ ಸಮಸ್ಯೆಗಳನ್ನು ನಿವಾರಿಸಲಿದೆ. ವರ್ಷದ 365 ದಿನವೂ ಎಚ್‌ಎಎಲ್‌ನಿಂದ ನಿರ್ವಹಣಾ ಸೇವೆ ಲಭ್ಯವಿರಲಿದೆ. ಹೀಗಾಗಿ ಈ ಹೆಲಿಕಾಪ್ಟರ್‌ಗೆ ಮಾರುಕಟ್ಟೆಯಿಂದ ಉತ್ತಮ ಸ್ಪಂದನೆ ದೊರೆಯುವ ನಿರೀಕ್ಷೆ ಇದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

- ಎಚ್‌ಎಎಲ್ ಅಧ್ಯಕ್ಷ ಡಿ.ಕೆ.ಸುನಿಲ್, 'ಧ್ರುವ ಹೆಲಿಕಾಪ್ಟರ್ 20 ವರ್ಷಗಳಿಂದ ಬಳಕೆಯಲ್ಲಿದೆ. ಇಷ್ಟು ದೀರ್ಘ ಅವಧಿಯಲ್ಲಿ ಎದುರಾದ ತಾಂತ್ರಿಕ ಸಮಸ್ಯೆಗಳು, ಸವಾಲುಗಳು ಮತ್ತು ಹೆಲಿಕಾಪ್ಟರ್‌ನ ಹೆಗ್ಗಳಿಕೆಗಳನ್ನು ಗಮನದಲ್ಲಿ ಇರಿಸಿಕೊಂಡು 'ಧ್ರುವ ಎನ್-ಜೆನ್' ಅನ್ನು ರೂಪಿಸಲಾಗಿದೆ. ನಾಗರಿಕರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಶೀಘ್ರದಲ್ಲೇ ನಾಗರಿಕ ಬಳಕೆ ಪ್ರಮಾಣ ಪತ್ರ ದೊರೆಯುವ ನಿರೀಕ್ಷೆ ಇದೆ' ಎಂದು ಹೇಳಿದರು.
- 'ಮುಂದಿನ ಹತ್ತು ವರ್ಷಗಳಲ್ಲಿ ಪ್ರವಾಸೋದ್ಯಮ, ಹೆಲಿ-ಅಂಬುಲೆನ್ಸ್, ಸಾಗರದಲ್ಲಿನ ತೈಲ ಬಾವಿ ಘಟಕಗಳ ಕ್ಷೇತ್ರದಲ್ಲಿ ಹೆಲಿಕಾಪ್ಟರ್‌ಗಳಿಗೆ ಬೇಡಿಕೆ ಹೆಚ್ಚಲಿದೆ. ಈ ಅವಧಿಯಲ್ಲಿ 1,000-1,500 ಧ್ರುವ ಎನ್-ಜೆನ್ ಹೆಲಿಕಾಪ್ಟರ್‌ಗಳನ್ನು ಮಾರಾಟ ಮಾಡುವ ಗುರಿ ಹಾಕಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

## ಭಾರತೀಯ ರಾಜಕೀಯ: ಕರ್ನಾಟಕ ರಾಜ್ಯ ಮರ್ಯಾದೆ ಹತ್ಯೆ ತಡೆ ಮಸೂದೆ;

### ❖ ಮರ್ಯಾದೆಗೇಡು ಹತ್ಯೆಗೆ ಜೈಲು

**ಸಂದರ್ಭ: ಜಾತಿಮೀರಿ ಪ್ರೀತಿಸುವವರು, ಮದುವೆಯಾದವರನ್ನು 'ಮರ್ಯಾದೆ'ಯ ಹೆಸರಿನಲ್ಲಿ ಹಲ್ಲೆ ಮಾಡುವ, ಹತ್ಯೆಗೈಯುವ ಇಲ್ಲವೆ ಅವರಿಗೆ ಬಹಿಷ್ಕಾರ ಹಾಕುವವರನ್ನು ಹೆಡೆಮುರಿ ಕಟ್ಟಲು ಮುಂದಾಗಬೇಕೆಂಬ ಜನಾಗ್ರಹಕ್ಕೆ ಸ್ಪಂದಿಸಿರುವ ಸರ್ಕಾರ, ಇದಕ್ಕಾಗಿ ಮಸೂದೆಯೊಂದನ್ನು ಸಿದ್ಧಪಡಿಸಿದೆ.**

- ಇಂತಹ ಕೃತ್ಯ ಎಸಗುವವರಿಗೆ ಜೀವಾವಧಿ ಜೈಲು ವಾಸ ಹಾಗೂ ₹5 ಲಕ್ಷದವರೆಗೆ ದಂಡ ವಿಧಿಸಲು ಮಸೂದೆ ಅವಕಾಶ ಕಲ್ಪಿಸಿದೆ.
- ತಾಲ್ಲೂಕಿನ ಇನಾಂ ಇತ್ತೀಚೆಗೆ ಹುಬ್ಬಳ್ಳಿ ವೀರಾಪುರ ಗ್ರಾಮದಲ್ಲಿ ಮರ್ಯಾದೆಗೇಡು ಹತ್ಯೆ ನಡೆದಿತ್ತು. ಆ ಬೆನ್ನಲ್ಲೆ, 'ಇಂತಹ ಮೃಗೀಯ, ಅಮಾನವೀಯ ಮತ್ತು ನಾಗರಿಕ ಸಮಾಜ ತಲೆತಗ್ಗಿಸುವ ಘಟನೆಗಳನ್ನು ತಡೆಯಲು ಪ್ರತ್ಯೇಕ ಕಾಯ್ದೆ ಜಾರಿಗೆ ತರಬೇಕು' ಎಂಬ ಅಗ್ರಹ ಹೆಚ್ಚಿತ್ತು.
- ಈ ಆಶಯ ಸಾಕಾರಗೊಳಿಸಲು ಕಾರ್ಯೋನ್ಮುಖ ವಾಗಿರುವ ಸರ್ಕಾರ, 'ಕರ್ನಾಟಕ ಮದುವೆ ಮತ್ತು ಸಂಗಾತಿ ಆಯ್ಕೆಯ ಸ್ವಾತಂತ್ರ್ಯ, ಗೌರವ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ತಡೆಗಟ್ಟುವಿಕೆ ಮತ್ತು ನಿಷೇಧ ಮಸೂದೆ-2026'ರ ಕರಡು ರೂಪಿಸಿದೆ. ಕಾನೂನು ಮತ್ತು ಸಂಸದೀಯ ಇಲಾಖೆ ಇದನ್ನು ಸಿದ್ಧಪಡಿಸಿದೆ.

**ಯಾವುದಕ್ಕೆ ನಿಷೇಧ?**

- ದಂಪತಿಯ ಸಾವು, ದೈಹಿಕ ಹಾನಿ ಅಥವಾ ಗಾಯ ಉಂಟುಮಾಡುವುದು
- ಮದುವೆ ತಡೆಯಲು ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಪ್ರಚೋದಿಸುವುದು
- ದಂಪತಿ ಅಥವಾ ಅವರಲ್ಲಿ ಒಬ್ಬರನ್ನು ನೇರವಾಗಿ ಅಥವಾ ಯಾವುದೇ ಸಂವಹನ ವಿಧಾನದ ಮೂಲಕ ಭೇಟಿಯಾಗಲು, ಸಹವಾಸ ಮಾಡಲು ಯತ್ನ ಅಥವಾ ಅವರು ಬದುಕುವುದಕ್ಕೆ ಕಿರುಕುಳ ನೀಡುವುದು
- ಸಂಗಾತಿ ಅಥವಾ ಅವರೊಂದಿಗೆ ಸಂಬಂಧ ಹೊಂದಿರುವ ಯಾರನ್ನಾದರೂ ಅಪಹರಿಸುವುದು, ಬೆದರಿಕೆ ಹಾಗೂ ಗೃಹ ಬಂಧನದಲ್ಲಿ ಇರಿಸುವುದು
- ದಂಪತಿ ಅಥವಾ ಅವರ ಕುಟುಂಬಕ್ಕೆ ಸಾಮಾಜಿಕ, ಆರ್ಥಿಕ ಬಹಿಷ್ಕಾರ ಹಾಕುವುದು ಹಾಗೂ ದಂಡ ವಿಧಿಸುವುದು
- ದಂಪತಿಯ ತಿಥಿ ಅಥವಾ ಅಂತ್ಯ ಸಂಸ್ಕಾರಕ್ಕೆ ಸಮಾನವಾದ ಆಚರಣೆ ಮಾಡುವುದು
- ಆಸ್ತಿಯಲ್ಲಿನ ಉತ್ತರಾಧಿಕಾರದ ಹಕ್ಕು ನಿರಾಕರಣೆ, ಒಪ್ಪಿಗೆ ವಿರುದ್ಧ ಬಲವಂತದ ಮದುವೆ ಮಾಡುವುದು
- ದಂಪತಿ ಅಥವಾ ಅವರಲ್ಲಿ ಒಬ್ಬರ ಬ್ಯಾಂಕ್ ಖಾತೆ ಸ್ಥಗಿತ ಅಥವಾ ಉದ್ಯೋಗಕ್ಕೆ ಸಂಚಕಾರ ತರುವುದು
- ಗರ್ಭಪಾತ ಮಾಡಿಸುವುದು ಅಥವಾ ಗರ್ಭಪಾತಕ್ಕೆ ಒತ್ತಾಯಿಸುವುದು

- ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಅಪರಾಧ ತಡೆಗೆ ಕಾನೂನು ಅವಶ್ಯ. ಮದುವೆ ಮತ್ತು ಸಂಬಂಧಗಳಲ್ಲಿ ವೈಯಕ್ತಿಕ ಆಯ್ಕೆಯ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವ ಯಾವುದೇ ನಡವಳಿಕೆಯನ್ನು ತಡೆಯಲು, ಶಿಕ್ಷಿಸಲು, ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಉದ್ದೇಶವನ್ನು ಮಸೂದೆ ಹೊಂದಿದೆ.
- **ವೈಯಕ್ತಿಕ ಜೀವನದ ವಿಷಯದಲ್ಲಿ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಗಾತಿ ಆಯ್ಕೆ ಮತ್ತು ಸಂಬಂಧದ ಹಕ್ಕುಗಳೂ ಸೇರಿವೆ. ತಮ್ಮ ಕುಟುಂಬದ ಸದಸ್ಯರು ಸೇರಿದಂತೆ ಯಾರಿಂದಲೂ ಅಡೆತಡೆ ಇಲ್ಲದೆ, ತಮ್ಮ ಆಯ್ಕೆಯಂತೆ ಮದುವೆಯಾಗುವ ಹಕ್ಕು ವಯಸ್ಕರಿಗೆ ಇದೆ.**
- ಮದುವೆ ಅಥವಾ ಸಂಬಂಧವು ಜಾತಿ, ಬುಡಕಟ್ಟು, ಸಮುದಾಯ. ಧರ್ಮ, ಸಂಪ್ರದಾಯಕ್ಕೆ ಅಗೌರವ ತಂದಿದೆ ಅಥವಾ ಕುಟುಂಬದ ಇಚ್ಛೆಗೆ ವಿರುದ್ಧವಾಗಿದೆ ಎಂಬ ಕಾರಣಕ್ಕೆ ವಿರೋಧಿಸುವುದು ಕಾನೂನುಬಾಹಿರ ಹಾಗೂ ಅಪರಾಧ ಎನಿಸಲಿದೆ. ಈ ರೀತಿಯ ವಿರೋಧ ವ್ಯಕ್ತವಾಗುವ ಆತಂಕ ಇರುವವರು ನ್ಯಾಯಾಲಯದ ಮೂಲಕ ಪೊಲೀಸರ ರಕ್ಷಣೆ ಪಡೆಯಬಹುದು. ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಪೊಲೀಸರ ಜವಾಬ್ದಾರಿ, ಆದೇಶ, ಉಲ್ಲಂಘಿಸಿದರೆ ಎರಡು ವರ್ಷಗಳವರೆಗೆ ಜೈಲು ಅಥವಾ ₹1 ಲಕ್ಷದವರೆಗೆ ದಂಡ ಅಥವಾ ಎರಡನ್ನೂ ವಿಧಿಸಬಹುದು. **ಮಹಿಳೆಯರಿಗೆ ಜೈಲು ಶಿಕ್ಷೆ ಇರುವುದಿಲ್ಲ**. ಇಂತಹ ಕೃತ್ಯದ ಪುರಾವೆ ನಾಶ, ಕೃತ್ಯಕ್ಕೆ ಪ್ರೇರೇಪಿಸುವುದು, ಸಂಚು ರೂಪಿಸುವುದು ಅಥವಾ ಆತ್ಮಹತ್ಯೆಗೆ ಪ್ರೋತ್ಸಾಹಿಸುವುದೂ ಅಪರಾಧ. ಇಂತಹ ಅಪರಾಧಗಳಲ್ಲಿ ಸಂಜ್ಞೆಯ, ಜಾಮೀನುರಹಿತ ಮತ್ತು ರಾಜೀ ಸಂಧಾನಕ್ಕೆ ಅವಕಾಶ ಇರುವುದಿಲ್ಲ.
- ಬಾಧಿತ ದಂಪತಿ ರಕ್ಷಣೆ ಕೋರಿ ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿ, ಪೊಲೀಸರಿಗೆ ದೂರು ನೀಡಬಹುದು.

- ದಂಪತಿಗೆ ಸುರಕ್ಷಿತ ಸ್ಥಳದಲ್ಲಿ ಮನೆ, ನಗದು ಅಥವಾ ವಸ್ತುವಿನ ರೂಪದಲ್ಲಿ ಪರಿಹಾರ ಒದಗಿಸುವುದು ರಾಜ್ಯ ಸರ್ಕಾರದ ಕರ್ತವ್ಯ ದೂರಿನ ಮೇಲೆ 60 ದಿನಗಳ ಒಳಗೆ ತನಿಖೆ ನಡೆಸಿ ವಿಶೇಷ ನ್ಯಾಯಾಲಯದಲ್ಲಿ ಆರೋ ಸಲ್ಲಿಸಬೇಕು. ಆರೋಪಪಟ್ಟಿ
- ಜಿಲ್ಲಾಧಿಕಾರಿ ಅಥವಾ ಎಸ್‌ಪಿಗಳು ದೂರನ್ನು ಸೂಕ್ಷ್ಮವಾಗಿ ನಿರ್ವಹಿಸ ಬೇಕು. ಮದುವೆಯನ್ನು ಶಾಸ್ತ್ರೋ-ಕ್ತವಾಗಿ ನಡೆಸಲು ಮತ್ತು ಅವರು ಬಯಸಿದರೆ ಪೊಲೀಸ್ ರಕ್ಷಣೆಯಲ್ಲಿ ನೋಂದಾಯಿಸಲು ನೆರವು ನೀಡ ಬಹುದು. ಮದುವೆಯ ನಂತರ ದಂಪತಿ ಬಯಸಿದರೆ, ನೆಪ ಮಾತ್ರದ ಶುಲ್ಕ ಪಾವತಿಸಿ ಒಂದು ತಿಂಗಳ ಅವಧಿಗೆ ವಸತಿ ಒದಗಿಸಬಹುದು. ನಂತರ ತಿಂಗಳ ಆಧಾರದಲ್ಲಿ ವಿಸ್ತರಿಸಬಹುದು.
- **<u>ಮೇಲ್ವಿಚಾರಣೆಗೆ ಸಮಿತಿ:</u>** ಇಂತಹ ಅಪರಾಧಗಳನ್ನು ತಡೆಗಟ್ಟಲು ಪ್ರತಿ ಜಿಲ್ಲೆಯಲ್ಲಿ ವಿಶೇಷ ಕೋಶವನ್ನು ಸರ್ಕಾರ ರಚಿಸಬೇಕು. ಈ ಕೋಶಗಳು ದೂರು ಸ್ವೀಕರಿಸಲು, ಸಹಾಯ ಮತ್ತು ರಕ್ಷಣೆ ನೀಡಲು 24 ಗಂಟೆಗಳ ಸಹಾಯವಾಣಿ ಸ್ಥಾಪಿಸಬೇಕು.
- ಕಾಯ್ದೆಯ ಅನುಷ್ಠಾನಕ್ಕೆ ಜಿಲ್ಲಾಧಿಕಾರಿ ಮೇಲ್ವಿಚಾರಣಾ ಸಮಿತಿ ರಚಿಸಬೇಕು. ಈ ಸಮಿತಿಯು ಶಾಸಕರು, ಎಸ್‌ಪಿ, ಮೂವರು ಗ್ರೂಪ್ 'ಎ' ಅಧಿಕಾರಿಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಮೂವರು ಸದಸ್ಯರನ್ನು ಒಳಗೊಂಡಿರುತ್ತದೆ. ಸಮಿತಿಯು ಕನಿಷ್ಠ * 3 ತಿಂಗಳಿಗೊಮ್ಮೆ ಸಭೆ ಸೇರಬೇಕು.
- ಪ್ರಕರಣಗಳ ವಿಚಾರಣೆಗೆ **ವಿಶೇಷ ತ್ವರಿತ ಗತಿ ನ್ಯಾಯಾಲಯವನ್ನು** ರಚಿಸಬಹುದು ಎಂದೂಮಸೂದೆ ಹೇಳಿದೆ.

ಏನೆಲ್ಲ ಶಿಕ್ಷೆ?

ಮರ್ಯಾದೆಗೇಡು ಹತ್ಯೆ ಮಾಡಿದವರಿಗೆ ಜೀವಾವಧಿ ಜೈಲು ಶಿಕ್ಷೆ ಮತ್ತು ₹5 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ

ದಂಪತಿ ಅಥವಾ ಅವರಲ್ಲಿ ಒಬ್ಬರಿಗೆ ಗಂಭೀರವಾದ ಗಾಯ ಉಂಟು ಮಾಡಿದವರಿಗೆ 10 ವರ್ಷಗಳಿಗಿಂತ ಕಡಿಮೆಯಿಲ್ಲದ, ಜೀವಾವಧಿವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹3 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ

ಸಾಮಾನ್ಯ ಗಾಯ ಉಂಟು ಮಾಡಿದವರಿಗೆ 3 ವರ್ಷಗಳಿಗಿಂತ ಕಡಿಮೆಯಿಲ್ಲದ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಜೈಲು ಶಿಕ್ಷೆ ಮತ್ತು ₹2 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ

ಹತ್ಯೆ ಅಥವಾ ಗಂಭೀರವಾದ ಗಾಯಕ್ಕೆ ಹೊರತಾದ ಅಪರಾಧ ಮಾಡಿದವರಿಗೆ 2 ವರ್ಷಗಳಿಗಿಂತ ಕಡಿಮೆಯಿಲ್ಲದ, 5 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ

ಬೆದರಿಕೆ ಒಡ್ಡಿದರೆ 3 ವರ್ಷಗಳಿಗಿಂತ ಕಡಿಮೆಯಿಲ್ಲದ, 5 ವರ್ಷಗಳವರೆಗೆಡ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹2 ಲಕ್ಷದವರೆಗೆ ವಿಸ್ತರಿಸಬಹುದಾದ ದಂಡ

ಅಪರಾಧ ಕೃತ್ಯಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿದವರಿಗೆ ಆರು ತಿಂಗಳಿಗಿಂತ ಕಡಿಮೆಯಿಲ್ಲದ, 5 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹1 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ

## <u>ಭಾರತೀಯ ರಾಜಕೀಯ: ಕನ್ನಡಿಗರಿಗೆ ಉದ್ಯೋಗ ಮೀಸಲಾತಿ</u>

### ❖ ಕನ್ನಡಿಗರಿಗೆ ಮೀಸಲು: ಮಸೂದೆ ಅಂತಿಮ


**ಸಂದರ್ಭ: ಖಾಸಗಿ ಉದ್ಯಮ ಮತ್ತು ಸಂಸ್ಥೆಗಳ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಉದ್ದೇಶದ ಮಸೂದೆ ಅಂತಿಮಗೊಂಡಿದೆ.**

- ಯಾವುದೇ ಕಂಪನಿಯ ಆಡಳಿತಾತ್ಮಕ ಹುದ್ದೆಗಳ ಪೈಕಿ ಶೇ 50ರಷ್ಟು, ಸಿ ಮತ್ತು ಡಿ ದರ್ಜೆಯ ಹುದ್ದೆಗಳಲ್ಲಿ ಶೇ 75ರಷ್ಟು ಮೀಸಲಾತಿ ನೀಡಲು ಈ ಮಸೂದೆ ರೂಪಿಸಲಾಗಿದೆ. ಈ ಹಿಂದೆ ಸಚಿವ ಸಂಪುಟ ಸಭೆಯಲ್ಲಿ ಮಸೂದೆಯ ಕುರಿತು ಸಚಿವರ ಮಧ್ಯೆ ಒಮ್ಮತ ಮೂಡದ ಕಾರಣ ತಡೆ ಹಿಡಿಯಲಾಗಿತ್ತು.
- 'ಈ ಮಸೂದೆಯ ಬಗ್ಗೆ ಇನ್ನಷ್ಟು ವಿಸ್ತೃತ ಚರ್ಚೆ ನಡೆಯಬೇಕಾಗಿದ್ದ ಕಾರಣ ತಡೆ ಹಿಡಿಯಲಾಗಿದೆ' ಎಂದು ಮುಖ್ಯಮಂತ್ರಿ ಹೇಳಿದ್ದರು. ಮಸೂದೆಗಳ ವಿಚಾರದಲ್ಲಿ ಸಚಿವರ ಮಧ್ಯೆ ಸಮನ್ವಯಕ್ಕಾಗಿ ಸಮಿತಿಯನ್ನೂ ರಚಿಸಲಾಗಿತ್ತು. ಮಸೂದೆಯಲ್ಲಿ ಸಣ್ಣಪುಟ್ಟ ಮಾರ್ಪಾಡುಗಳನ್ನು ಮಾಡಲಾಗಿದೆ. ಸದ್ಯವೇ ಸಚಿವ ಸಂಪುಟ ಸಭೆ ಒಪ್ಪಿಗೆಗೆ ಎಂದು ಮೂಲಗಳು ಹೇಳಿವೆ.

- ಖಾಸಗಿ ಉದ್ಯಮ ಮತ್ತು ಸಂಸ್ಥೆಯು ನಿಗದಿಪಡಿಸಿದ ಶೇಕಡಾವಾರು ಪ್ರಮಾಣದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡದಿದ್ದರೆ ಅಥವಾ ಅದಕ್ಕಿಂತ ಕಡಿಮೆ ಮೀಸಲಾತಿ ನೀಡಿದ್ದರೆ ಅಂತಹ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಭೂಮಿ, ತೆರಿಗೆ ರಿಯಾಯಿತಿ ಅಥವಾ ತೆರಿಗೆಯ ಮುಂದೂಡಿಕೆ, ಸಹಾಯಧನ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ.
- ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವ ಬಗ್ಗೆ ಸರ್ಕಾರಕ್ಕೆ ಲಿಖಿತ ಭರವಸೆ ನೀಡಿಯೂ ಆ ಪ್ರಕಾರ ನಡೆದುಕೊಳ್ಳದ ಉದ್ಯಮಗಳಿಗೆ ಸರ್ಕಾರ ನೀಡಿದ್ದ ತೆರಿಗೆ ರಿಯಾಯಿತಿ ಅಥವಾ ತೆರಿಗೆಯ ಮುಂದೂಡಿಕೆ, ಸಹಾಯಧನ ಮತ್ತು ಇತರ ಸೌಲಭ್ಯಗಳನ್ನು ಮುಂದುವರಿಸಬಾರದು. ದಂಡ ವಿಧಿಸಬಹುದು ಎಂಬ ಅಂಶವನ್ನೂ ಸೇರಿಸಲಾಗಿತ್ತು.

## ಪರಿಸರ: ಹವಾಮಾನ ಬದಲಾವಣೆ

### ❖ ಇಂಗಾಲದ ತೆರಿಗೆ: ಭಾರತದ ಮೇಲೆ ಏನು ಪರಿಣಾಮ?



ಇಂಗಾಲ ಹೊರಸೂಸುವಿಕೆ ಅಧಿಕವಾಗಿರುವ ಲೋಹಗಳ ಉತ್ಪನ್ನಗಳ ಮೇಲೆ ಐರೋಪ್ಯ ಒಕ್ಕೂಟ (ಇಯು) ಇಂಗಾಲದ ತೆರಿಗೆ (ಕಾರ್ಬನ್ ಟ್ಯಾಕ್ಸ್) ವಿಧಿಸಿದ್ದು, ಅದು ಗುರುವಾರದಿಂದ (ಜ.1) ಜಾರಿಗೆ ಬಂದಿದೆ. ಹಸಿರುಮನೆ ಅನಿಲಗಳನ್ನು ಕಡಿಮೆ ಮಾಡುವಲ್ಲಿ ಇಂಗಾಲದ ತೆರಿಗೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಇಯು ಪ್ರತಿಪಾದಿಸಿದೆ. ಆದರೆ, ಈ ತೆರಿಗೆಯು ಭಾರತದ ಉಕ್ಕು, ಅಲ್ಯೂಮಿನಿಯಂ ಸೇರಿದಂತೆ ಕೆಲವು ಲೋಹಗಳ ಉತ್ಪಾದನೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಸಣ್ಣ ರಫ್ತುದಾರರನ್ನು ಇಯು ಮಾರುಕಟ್ಟೆಯಿಂದಲೇ ಹೊರತಳ್ಳುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ

# ಇಂಗಾಲದ ತೆರಿಗೆ ಭಾರತದ ಮೇಲೆ ಏನು ಪರಿಣಾಮ?



ಪ್ರಜಾವಾಣಿ ವಾರ್ತೆ

ಸುಂಕಗಳನ್ನು ವಿಧಿಸುವ ಮೂಲಕ ಸಮರ ಸಾರುವ, ಸುಂಕಗಳನ್ನು ವಿಧಿಸುವ ಮೂಲಕವೇ ಇನ್ನೊಂದು ದೇಶದ ಮೇಲೆ ಒತ್ತಡ ಹೇರುವ ಕಾಲಘಟ್ಟದಲ್ಲಿ ಕೆಲವು ಸರಕುಗಳಿಗೆ ಐರೋಪ್ಯ ಒಕ್ಕೂಟ ವಿಧಿಸಿರುವ ಹೊಸ ಬಗೆಯ ಸುಂಕವೊಂದರ ತಲೆಬಿಸಿ ಭಾರತಕ್ಕೆ ಗುರುವಾರದಿಂದ ಶುರುವಾಗಿದೆ. ಆದರೆ ಇದು ಮೇಲ್ನೋಟಕ್ಕೆ ರಾಜಕೀಯ ಉದ್ದೇಶದ ಸುಂಕಕ್ಕಿಂತಲೂ, ಪರಿಸರ ಕಾಳಜಿಯ ಸುಂಕದಂತೆ ಇದೆ.

ಐರೋಪ್ಯ ಒಕ್ಕೂಟವು 'ಇಂಗಾಲದ ತೆರಿಗೆ' ಹೆಸರಿನ ಸುಂಕವೊಂದನ್ನು ಜನವರಿ 1ರಿಂದ ಜಾರಿಗೆ ತಂದಿದೆ. ಇದು ಭಾರತದ ಕೆಲವು ರಫ್ತು ವಲಯಗಳ ಮೇಲೆ ಹೆಚ್ಚು ಪರಿಣಾಮ ಬೀರಲಿದೆ ಎಂಬುದು ತಜ್ಞರ ಅಂದಾಜು. ಅದರಲ್ಲೂ ಉಕ್ಕು ರಫ್ತಿನ ಮೇಲೆ ವ್ಯಾಪಕ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ತಯಾರಿಕಾ ಹಂತದಲ್ಲಿ ಇಂಗಾಲವನ್ನು ವಿಸರ್ಜಿಸುವ ಸರಕುಗಳ ಮೇಲೆ 27 ದೇಶಗಳ ಐರೋಪ್ಯ ಒಕ್ಕೂಟವು ಈ ತೆರಿಗೆ ವಿಧಿಸಲಾರಂಭಿಸಿದೆ.

ಬ್ಲಾಸ್ಟ್ ಫರ್ನೆಸ್ ಮೂಲಕ ಉಕ್ಕು ತಯಾರಿಸುವಾಗ ಇಂಗಾಲದ ಡೈ ಆಕ್ಸೈಡ್ ವಿಸರ್ಜನೆಯು ಅತಿಹೆಚ್ಚಿನ ಮಟ್ಟದಲ್ಲಿರುತ್ತದೆ. ಅದೇ ರೀತಿ, ಅಲ್ಯೂಮಿನಿಯಂ ತಯಾರಿಕೆಯ ಸಂದರ್ಭದಲ್ಲಿ ಕಲ್ಲಿದ್ದಲಿನಿಂದ ಉತ್ಪಾದಿಸಿದ ವಿದ್ಯುತ್ ಬಳಕೆ ಮಾಡಿದರೆ, ಆ ಪ್ರಕ್ರಿಯೆಯಲ್ಲಿ ಇಂಗಾಲದ ಡೈ ಆಕ್ಸೈಡ್ ವಿಸರ್ಜನೆ ಹೆಚ್ಚಿರುತ್ತದೆ. ಇದರಿಂದಾಗಿ ಪಾವತಿ ಮಾಡಬೇಕಾದ ಇಂಗಾಲದ ತೆರಿಗೆಯ ಮೊತ್ತವೂ ಹೆಚ್ಚಾಗುತ್ತದೆ ಎಂದು ಆರ್ಥಿಕತೆ ಕುರಿತ ಅಧ್ಯಯನ ವರದಿಗಳನ್ನು ಸಿದ್ಧಪಡಿಸುವ 'ಗ್ಲೋಬಲ್ ಟ್ರೇಡ್ ರಿಸರ್ಚ್ ಇನ್‌ಸ್ಟಿಟ್ಯೂಟ್' (ಜಿಟಿಆರ್‌ಐ) ಹೇಳಿದೆ.

ಭಾರತದಿಂದ ಐರೋಪ್ಯ ಒಕ್ಕೂಟದ ದೇಶಗಳಿಗೆ ಲೋಹಗಳನ್ನು ರಫ್ತುಮಾಡುವ ಹಲವು ಕಂಪನಿಗಳು, ರಫ್ತುದಾರರು ತಮ್ಮ ಉತ್ಪನ್ನಗಳ ಬೆಲೆಯನ್ನು ಶೇಕಡ 15ರಿಂದ ಶೇ 22ರಷ್ಟು ಕಡಿಮೆ ಮಾಡಬೇಕಾಗುತ್ತದೆ. ಆಗ ಐರೋಪ್ಯ ಒಕ್ಕೂಟದಲ್ಲಿ ಆ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವವರು ಬೆಲೆ ಇಳಿಕೆಯ ಪ್ರಯೋಜನವನ್ನು ಬಳಸಿಕೊಂಡು, ಇಂಗಾಲದ ತೆರಿಗೆಯನ್ನು ಅಲ್ಲಿ ಪಾವತಿಸಲು ಸಾಧ್ಯವಾಗುತ್ತದೆ ಎಂದು ಜಿಟಿಆರ್‌ಐ ವಿವರಿಸಿದೆ.

**ಸಂಕೀರ್ಣ ಪ್ರಕ್ರಿಯೆ:** ಇಂಗಾಲದ ತೆರಿಗೆ ಪಾವತಿ ವ್ಯವಸ್ಥೆಯು ಬಹಳ ಸಂಕೀರ್ಣವಾದ ಪ್ರಕ್ರಿಯೆಗಳನ್ನು ಒಳಗೊಂಡಿದೆ ಎಂದು ಜಿಟಿಆರ್‌ಐ ಕಂಡುಕೊಂಡಿದೆ. ಸಂಕೀರ್ಣ ಪ್ರಕ್ರಿಯೆಯ ಕಾರಣದಿಂದಾಗಿ ಭಾರತದ ಕಂಪನಿಗಳ ಕೆಲವು ವೆಚ್ಚಗಳು ಹೆಚ್ಚುತ್ತವೆ. ಇದರಿಂದಾಗಿ ದೇಶದ ಕೆಲವು ಸಣ್ಣ ಕಂಪನಿಗಳು ಯುರೋಪಿನ ಮಾರುಕಟ್ಟೆಯಿಂದ ಪೂರ್ತಿಯಾಗಿ ಹೊರಬರಬೇಕಾದ ಸ್ಥಿತಿಯೂ ಎದುರಾಗಬಹುದು ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

'ಇಂಗಾಲದ ತೆರಿಗೆ ವ್ಯವಸ್ಥೆಯ ಅಡಿಯಲ್ಲಿ ಪ್ರತಿ ಘಟಕದ ಮಟ್ಟದಲ್ಲಿ ಇಂಗಾಲದ ವಿಸರ್ಜನೆ ಎಷ್ಟು ಎಂಬುದರ ಲೆಕ್ಕ ಇಡಬೇಕು. ಆ ಘಟಕದಲ್ಲಿ ನೇರವಾಗಿ ಬಳಕೆಯಾಗುವ ಇಂಧನದಿಂದ ಎಷ್ಟು ಇಂಗಾಲದ ವಿಸರ್ಜನೆ ಆಯಿತು, ವಿದ್ಯುತ್ ಬಳಕೆಯಿಂದ ಎಷ್ಟು ಇಂಗಾಲದ ವಿಸರ್ಜನೆ ಆಯಿತು ಎಂಬುದನ್ನು ಇದು ಒಳಗೊಳ್ಳಬೇಕು' ಎಂದು ಅವರು ವಿವರಿಸಿದ್ದಾರೆ.

ಇಂಧನದ ಬಳಕೆ, ವಿದ್ಯುತ್ ಬಳಕೆ, ತಯಾರಿಕಾ ಪ್ರಮಾಣದ ಬಗ್ಗೆ ರಫ್ತು ಉದ್ದೇಶಕ್ಕಾಗಿ ತಯಾರಿಕೆ ಮಾಡುವವರು ತ್ರೈಮಾಸಿಕದ ಆಧಾರದಲ್ಲಿ ಲೆಕ್ಕ ಇರಿಸಬೇಕಾಗುತ್ತದೆ. ಈ ಲೆಕ್ಕವು ಐರೋಪ್ಯ ಒಕ್ಕೂಟದ ವಿಧಾನಗಳಿಗೆ ಅನುಗುಣವಾಗಿ ಇರಬೇಕು, ಲೆಕ್ಕವು ತಪಾಸಣೆಗೆ ಲಭ್ಯವಿರುವಂತೆ ಇರಬೇಕು... ಇವೆಲ್ಲ ಹಣಕಾಸಿನ ಲೆಕ್ಕಪತ್ರಗಳ ಪರಿಶೀಲನೆಯನ್ನು ಹೋಲುತ್ತವೆ.

**ಲಾಭ ಯಾರಿಗೆ?:** ಇಂಗಾಲದ ಹೊರಸೂಸುವಿಕೆ ಕಡಿಮೆ ಇರುವ ತಯಾರಿಕಾ ಕಂಪನಿಗಳಿಗೆ, ಶುದ್ಧ ಇಂಧನವನ್ನು ಬಳಕೆ ಮಾಡುವವರಿಗೆ ಈ ವ್ಯವಸ್ಥೆಯು ಐರೋಪ್ಯ ಒಕ್ಕೂಟದ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಅನುಕೂಲಗಳನ್ನು ಕಲ್ಪಿಸಿಕೊಡುತ್ತದೆ ಎಂದು ಶ್ರೀವಾಸ್ತವ ಹೇಳಿದ್ದಾರೆ.

ಇಂಗಾಲದ ತೆರಿಗೆ ವಿಧಿಸುವ ಕ್ರಮವು ಈಗ ಐರೋಪ್ಯ ಒಕ್ಕೂಟದ ಜೊತೆ ಭಾರತ ನಡೆಸುತ್ತಿರುವ ವ್ಯಾಪಾರ ಒಪ್ಪಂದ ಕುರಿತ ಮಾತುಕತೆಯಲ್ಲಿಯೂ ಪ್ರಸ್ತಾಪ ಆಗಿದೆ.

## ಕಡಿಮೆ ಆದಾಯದ ದೇಶಗಳಿಗೆ ಹೊಡೆತ

- ಇಂಧನಕ್ಕಾಗಿ ಹೆಚ್ಚು ವೆಚ್ಚ ಮಾಡುವ ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳ ಮೇಲೆ ಮತ್ತು ಸಿಮೆಂಟ್, ಉಕ್ಕು, ಅಲ್ಯೂಮಿನಿಯಂ, ವಿದ್ಯುತ್ ಮುಂತಾದ ಉದ್ಯಮಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ
- ಇಂಗಾಲದ ತೆರಿಗೆಯ ಜಾರಿಯ ನಂತರ ಹಸಿರುಮನೆ ಅನಿಲಗಳ ಹೊರಸೂಸುವಿಕೆಯಲ್ಲಿ ಎಷ್ಟು ಕಡಿತ ಆಗಿದೆ ಎನ್ನುವುದನ್ನು ನಿಖರವಾಗಿ ಕಂಡುಕೊಳ್ಳುವುದು ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆಯಾಗಿದೆ. ಹೀಗಾಗಿ ಇಂಗಾಲದ ತೆರಿಗೆ ವಿಧಿಸುವುದಕ್ಕಿಂತ ಭಿನ್ನವಾದ, ನೇರವಾದ ಕ್ರಮಗಳನ್ನು ಅನುಸರಿಸುವುದು ಹೆಚ್ಚು ಫಲಪ್ರದ
- ಇಂಗಾಲದ ತೆರಿಗೆ ವಿಧಿಸುವುದಕ್ಕೆ ಫ್ರಾನ್ಸ್ ಸೇರಿದಂತೆ ಯುರೋಪ್‌ನ ಹಲವು ದೇಶಗಳಲ್ಲಿಯೂ ಪ್ರಬಲ ವಿರೋಧ ವ್ಯಕ್ತವಾಗಿದೆ. ಕೆಲವರು ನ್ಯಾಯಾಲಯದಲ್ಲಿಯೂ ಅದನ್ನು ಪ್ರಶ್ನಿಸಿದ್ದಾರೆ
- ಇಂಧನ ಬಳಸುವ ಬೃಹತ್ ಉದ್ದಿಮೆಗಳು ಇಂಗಾಲದ ತೆರಿಗೆಯನ್ನು ವಿರೋಧಿಸಿವೆ. ಇದರಿಂದ ಉತ್ಪಾದನಾ ವೆಚ್ಚ ಹೆಚ್ಚಾಗಲಿದೆ. ಈ ತೆರಿಗೆ ನೀತಿಯಿಂದ ಹೊರತಾದ ದೇಶಗಳೊಂದಿಗೆ ಸ್ಪರ್ಧಿಸುವುದು ಕಷ್ಟವಾಗಲಿದೆ. ಉತ್ಪಾದಕರು ದೇಶ ತೊರೆಯುವ ಸಾಧ್ಯತೆಗಳೂ ಇವೆ
- ಸಮೂಹ ಬ್ಯಾಟರಿಚಾಲಿತ ವಾಹನಗಳ (ಇವಿ) ಅಳವಡಿಕೆ, ನವೀಕರಿಸಬಹುದಾದ ಇಂಧನಕ್ಕೆ ಹೆಚ್ಚು ಬಂಡವಾಳ ಹೂಡಿಕೆ, ಮೂಲಸೌಕರ್ಯ ವೃದ್ಧಿ, ಆರ್ಥಿಕ ಸಹಾಯ ನೀಡುವಂಥ ಪರೋಕ್ಷ ಕ್ರಮಗಳ ಮೂಲಕ ಅಲ್ಪ ಅವಧಿಯಲ್ಲೇ ಹಸಿರು ಅನಿಲಗಳ ಹೊರಸೂಸುವಿಕೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು

ಆಧಾರ: ಪಿಟಿಐ, ಎಎಫ್‌ಪಿ ವರದಿಗಳು, ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ (ಪಿಐಬಿ), ಅರ್ಥ್.ಒಆರ್‌ಜಿ

## ಇಂಗಾಲದ ತೆರಿಗೆ ಅಂದರೆ ಏನು?

ಐರೋಪ್ಯ ಒಕ್ಕೂಟವು ಇದನ್ನು ತಾಂತ್ರಿಕವಾಗಿ 'ಇಂಗಾಲದ ಗಡಿ ಹೊಂದಾಣಿಕೆ ವ್ಯವಸ್ಥೆ' (ಸಿಬಿಎಎಂ) ಎಂದು ಕರೆದಿದೆ. ಇದನ್ನು ಆಡುಮಾತಿನಲ್ಲಿ ಇಂಗಾಲದ ತೆರಿಗೆ ಎಂದು ಕರೆಯಲಾಗುತ್ತಿದೆ. ಐರೋಪ್ಯ ಒಕ್ಕೂಟದಲ್ಲಿನ ವಿವಿಧ ಕಂಪನಿಗಳು ತಾವು ವಿಸರ್ಜಿಸುವ ಇಂಗಾಲಕ್ಕೆ ಪ್ರತಿಯಾಗಿ ಒಂದಿಷ್ಟು ಶುಲ್ಕವನ್ನು ಪಾವತಿಸುತ್ತವೆ. ಇದೇ ಬಗೆಯಲ್ಲಿ, ಐರೋಪ್ಯ ಒಕ್ಕೂಟಕ್ಕೆ ವಿವಿಧ ಉತ್ಪನ್ನಗಳನ್ನು ಬೇರೆ ದೇಶಗಳಿಂದ ರಫ್ತು ಮಾಡುವ ಕಂಪನಿಗಳೂ ತಾವು ವಿಸರ್ಜಿಸುವ ಇಂಗಾಲಕ್ಕೆ ಪ್ರತಿಯಾಗಿ ಶುಲ್ಕ ಪಾವತಿಸುವಂತೆ ಆಗಬೇಕು ಎಂಬ ಉದ್ದೇಶದಿಂದ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಇಂಗಾಲದ ವಿಸರ್ಜಿಸುವಿಕೆ ಹೆಚ್ಚಿನ ಪ್ರಮಾಣದಲ್ಲಿ ಇರುವ ಉಕ್ಕು, ಅಲ್ಯೂಮಿನಿಯಂ, ರಸಗೊಬ್ಬರ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವವರು, ಆ ಉತ್ಪನ್ನಗಳಿಂದ ಆಗುವ ಇಂಗಾಲದ ಡೈ ಆಕ್ಸೈಡಿನ ವಿಸರ್ಜನೆ ಎಷ್ಟು ಎಂಬುದನ್ನು ಘೋಷಿಸಬೇಕಾಗುತ್ತದೆ. ವಿಸರ್ಜನೆ ಪ್ರಮಾಣವು ಐರೋಪ್ಯ ಒಕ್ಕೂಟ ನಿಗದಿ ಮಾಡಿರುವ ಮಟ್ಟಕ್ಕಿಂತ ಹೆಚ್ಚಿದ್ದರೆ, ಅದಕ್ಕೆ ಶುಲ್ಕ ಪಾವತಿಸಬೇಕಾಗುತ್ತದೆ.

ಈ ನಿಯಮದ ಬಗ್ಗೆ ಟೀಕೆಗಳೂ ಇವೆ. ಇದು ಯುರೋಪಿನ ತಯಾರಕರಿಗೆ ಹೆಚ್ಚು ಅನುಕೂಲ ಮಾಡಿಕೊಡುವಂತೆ ಇದೆ ಎಂದು ಕೆಲವರು ಟೀಕಿಸಿದ್ದಾರೆ. ಆದರೆ ಈ ನಿಯಮವು ಪರಿಸರಕ್ಕೆ ಪೂರಕವಾಗುವ ಕ್ರಮಗಳನ್ನು ಉತ್ತೇಜಿಸುತ್ತದೆ ಎಂದು ಒಕ್ಕೂಟ ಪ್ರತಿಪಾದಿಸಿದೆ.

## ಕಾಂಗ್ರೆಸ್ ಕಳವಳ

ಐರೋಪ್ಯ ಒಕ್ಕೂಟ ವಿಧಿಸಿರುವ ಇಂಗಾಲದ ತೆರಿಗೆಯಿಂದ ಕೆಲವು ಸರಕುಗಳ ರಫ್ತು ಬೆಲೆ ಹೆಚ್ಚಳವಾಗಲಿದ್ದು, ಈ ತೆರಿಗೆಯನ್ನು ಒಪ್ಪಲು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಹೇಳಿದೆ. ಈ ಕುರಿತು ಹೇಳಿಕೆ ನೀಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಜಿಟಿಆರ್‌ಐ ವರದಿಯಲ್ಲಿನ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಜತೆಗೆ, ದಾಖಲೀಕರಣ, ಇಂಗಾಲದ ಹೊರಸೂಸುವಿಕೆ ವರದಿ ಇತ್ಯಾದಿ ಪ್ರಕ್ರಿಯೆಗಳಿಂದ ದೇಶದ ರಫ್ತುದಾರರ ಹೊರೆ ಹೆಚ್ಚಾಗಲಿದೆ; ಈ ನಿಯಂತ್ರಣಾ ಕ್ರಮವನ್ನು ಇದೇ ತಿಂಗಳಲ್ಲಿ ಅಂತಿಮಗೊಳ್ಳಲಿರುವ ಭಾರತ–ಇಯು ಮುಕ್ತ ವ್ಯಾಪಾರ ಒಪ್ಪಂದದ ವೇಳೆ ಚರ್ಚಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

**ರಷ್ಯಾ ವಿರೋಧ:** ಇಂಗಾಲದ ತೆರಿಗೆ ವ್ಯವಸ್ಥೆಯು ಅಂತರರಾಷ್ಟ್ರೀಯ ವ್ಯಾಪಾರದ ನಿಯಮಗಳಿಗೆ ವಿರುದ್ಧವಾಗಿದೆ ಎಂದು ರಷ್ಯಾ ಆಕ್ಷೇಪ ದಾಖಲಿಸಿದೆ. ಈ ವಿಚಾರವಾಗಿ ಅದು ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ಮೊರೆ ಹೋಗಿದೆ. ಐರೋಪ್ಯ ಒಕ್ಕೂಟದ ಕ್ರಮವನ್ನು ಚೀನಾ ಕೂಡ ವಿರೋಧಿಸಿದೆ. ಇದು 'ವ್ಯಾಪಾರದ ವಿಚಾರವಾಗಿ ಕೈಗೊಂಡಿರುವ ಏಕಪಕ್ಷೀಯ ಕ್ರಮ' ಎಂದು ಚೀನಾ ಹೇಳಿದೆ.


## ಏನಿರಲಿದೆ ಭಾರತದ ನಡೆ?

ದೇಶದ ರಫ್ತು ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಬಗೆಯಲ್ಲಿ ಬ್ರಿಟನ್ ದೇಶವು ಇಂಗಾಲದ ತೆರಿಗೆಯನ್ನು ವಿಧಿಸಿದ್ದೇ ಆದಲ್ಲಿ ಭಾರತವು 'ಪ್ರತಿಕ್ರಿಯಿಸಬೇಕಾಗುತ್ತದೆ, ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು 2024ರ ಜುಲೈನಲ್ಲಿ ಎಚ್ಚರಿಸಿದ್ದರು.

ಆದರೆ ಈಗ ಸಿಬಿಎಎಂ ನಿಯಮಗಳನ್ನು ಐರೋಪ್ಯ ಒಕ್ಕೂಟವು ಜಾರಿಗೆ ತಂದಿದೆ. ಕೇಂದ್ರವು ಈಗ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಗಮನಿಸಬೇಕಿದೆ.

ಬ್ರಿಟನ್ ದೇಶವು ಸಿಬಿಎಎಂ ನಿಯಮಗಳನ್ನು 2027ರಿಂದ ಜಾರಿಗೆ ತರುವ ನಿರೀಕ್ಷೆ ಇದೆ. ಐರೋಪ್ಯ ಒಕ್ಕೂಟದ ಸಿಬಿಎಎಂ ನಿಯಮಗಳ ಬಗ್ಗೆಯೂ ಪ್ರತಿಕ್ರಿಯೆ ನೀಡಿದ್ದ ಗೋಯಲ್ ಅವರು 'ಇದರಿಂದ ಒಕ್ಕೂಟಕ್ಕೇ ಹೆಚ್ಚಿನ ನಷ್ಟ ಆಗಲಿದೆ' ಎಂದು ಹೇಳಿದ್ದರು.

ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದದ ವಿಚಾರವಾಗಿ ಮಾತುಕತೆ ನಡೆಯುತ್ತಿದೆ. ಸಿಬಿಎಎಂ ಬಗ್ಗೆಯೂ ಆ ಮಾತುಕತೆಗಳಲ್ಲಿ ಪ್ರಸ್ತಾಪ ಆಗುತ್ತದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಗಳು ಈಚೆಗೆ ತಿಳಿಸಿದ್ದರು.



# ಹುಲಿಗಳಿಗಿಲ್ಲ ಜಾಗ...

ಜಗತ್ತಿನಲ್ಲಿರುವ ಹುಲಿಗಳ ಸಂಖ್ಯೆಯಲ್ಲಿ ಶೇ 75ರಷ್ಟು ಹುಲಿಗಳಿಗೆ ಭಾರತವೇ ತವರು. 2025ರಲ್ಲಿ ದೇಶದಾದ್ಯಂತ ಒಟ್ಟು 166 ಹುಲಿಗಳು ಮೃತಪಟ್ಟಿವೆ. ‘ಒಂದೆಡೆ, ಹುಲಿಗಳ ಸಂಖ್ಯೆ ಅಧಿಕವಾಗುತ್ತಿದೆ. ಇನ್ನೊಂದೆಡೆ, ಅವುಗಳಿಗೆ ಸಾಕಷ್ಟು ಅರಣ್ಯ ಪ್ರದೇಶ ಲಭ್ಯವಿಲ್ಲ. ತಮ್ಮ ಗಡಿಗಳನ್ನು ಗುರುತಿಸಿಕೊಳ್ಳುವ ಕಾಳಗದಲ್ಲಿ ಹುಲಿಗಳು ಸಾಯುತ್ತಿವೆ’ ಎನ್ನುವುದು ತಜ್ಞರ ಅಭಿಪ್ರಾಯ

**ದೇಶದ ಸ್ಥಿತಿ: ಸಾವಿನ ಸಂಖ್ಯೆ ಏರಿಕೆ**

| | |
|---|---|
| 2023 | 182 |
| 2024 | 126 |
| 2025 | 166 |

88 — ಹುಲಿ ಸಂರಕ್ಷಿತ ಪ್ರದೇಶದ ಹೊರಗೆ ಮೃತಪಟ್ಟ ಹುಲಿಗಳ ಸಂಖ್ಯೆ

78 — ಹುಲಿ ಸಂರಕ್ಷಿತ ಪ್ರದೇಶದ ಒಳಗೆ ಮೃತಪಟ್ಟ ಹುಲಿಗಳ ಸಂಖ್ಯೆ

**ಯಾವ ರಾಜ್ಯದಲ್ಲಿ ಎಷ್ಟು ಸಾವು**



ಆಧಾರ: ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ವೆಬ್‌ಸೈಟ್, ಪಿಟಿಐ

**ಮಧ್ಯಪ್ರದೇಶದ ಮಾಹಿತಿ**

| | |
|---|---|
| 2014 | 308 |
| 2018 | 526 |
| 2022 | 785 |

## ‘ಹುಲಿಗಳಿಗೆ ಜಾಗ ಎಲ್ಲಿದೆ?’

ದೇಶದಲ್ಲಿನ ಹುಲಿ ಸಂಖ್ಯೆಯು ಗರಿಷ್ಠ ಮಟ್ಟವನ್ನು ತಲುಪಿದೆ. ಈ ಕಾರಣದಿಂದಲೇ ಅವುಗಳು ಗಡಿ ಸಮಸ್ಯೆಯನ್ನು ಎದುರಿಸುತ್ತಿವೆ. ಮಧ್ಯ ಪ್ರದೇಶದಲ್ಲಿ 2014ರಿಂದ ಈಚೆಗೆ ಹುಲಿಗಳ ಸಂಖ್ಯೆಯು ಶೇ 60ರಷ್ಟು ಹೆಚ್ಚಳವಾಗಿವೆ. ಇದಂತೂ ಭಾರಿ ಬೆಳವಣಿಗೆಯೇ ಆಗಿದೆ. ಇಲ್ಲಿರುವ ಪ್ರಶ್ನೆ ಏನೆಂದರೆ, ಇಷ್ಟೊಂದು ಹುಲಿಗಳಿಗೆ ಜಾಗ ಎಲ್ಲಿದೆ? ಗಡಿ ಗುರುತಿಸಿಕೊಳ್ಳಲು ಹುಲಿಗಳು ಪರಸ್ಪರ ಜಗಳವಾಡುತ್ತಿದ್ದು, ಸಾಯುತ್ತಿವೆ

**ಜೈರಾಮ್ ಶುಕ್ಲಾ,** ವನ್ಯಜೀವಿ ತಜ್ಞ

## ‘ಹುಲಿ ಹೆಚ್ಚಿರುವಲ್ಲಿ ಸಾವೂ ಹೆಚ್ಚು’

ಜಗತ್ತಿನಲ್ಲಿಯೇ ಮಧ್ಯ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಹುಲಿಗಳಿವೆ. ಈ ಪ್ರದೇಶದಲ್ಲಿಯೇ ಹುಲಿಗಳ ಸಾವಿನ ಸಂಖ್ಯೆಯೂ ಅಧಿಕವಾಗಿದೆ. ಹುಲಿಗಳ ಸಾವುಗಳನ್ನು ನಾವು ಬೇಟೆಯಾಡಿದ್ದು ಎಂದೇ ಪರಿಗಣಿಸುತ್ತೇವೆ. ಇದಕ್ಕೆ ವ್ಯತಿರಿಕ್ತ ಮಾಹಿತಿಗಳು ದೊರೆತರೆ, ಮಾಹಿತಿಯಂತೆಯೇ ಸಾವಿನ ಕಾರಣವನ್ನು ದಾಖಲು ಮಾಡಿಕೊಳ್ಳುತ್ತೇವೆ. ಮಾನವ ಹಸ್ತಕ್ಷೇಪದಿಂದ ಅರಣ್ಯದ ವ್ಯಾಪ್ತಿಯು ಕುಗ್ಗುತ್ತಲೇ ಇದೆ. ಇದರಿಂದ ಹುಲಿಗಳ ಓಡಾಟಕ್ಕೆ ತೊಂದರೆಯಾಗುತ್ತಿದೆ

**ಸುಭರಂಜನ್ ಸೇನ್**
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)

## ‘ನಿಖರ ಕಾರಣ ತಿಳಿಸುವುದು ಮುಖ್ಯ’

ಹುಲಿಗಳು ಸಾಯುತ್ತವೆ ಎನ್ನುವುದು ನೈಸರ್ಗಿಕ ಪ್ರಕ್ರಿಯೆ. ಆದರೆ, ಸಾವಿನ ಕಾರಣ ಮುಖ್ಯವಾಗುತ್ತದೆ. ಕಳೆದ ವರ್ಷ ಜೂನ್‌ನಲ್ಲಿ ಮಲೆ ಮಹದೇಶ್ವರ ಬೆಟ್ಟದಲ್ಲಿ ಹುಲಿಗಳಿಗೆ ವಿಷ ಉಣಿಸಿದ ಪ್ರಕರಣ ನಡೆದಿತ್ತು. ಇದು ಗಂಭೀರವಾದುದು. ಅಪಘಾತಗಳಿಂದ ಸಾಯುವುದು, ಬೇಟೆಯಾಡುವುದು, ಹುಲಿಗಳ ಉಗುರು, ಚರ್ಮ ಕಳ್ಳಸಾಗಣೆಗಾಗಿ ಹತ್ಯೆ ಮಾಡುತ್ತಾರೆ ಎನ್ನುವುದು ಆಲೋಚಿಸಬೇಕಾದ ವಿಷಯ. ಆದ್ದರಿಂದ, ವರದಿಗಳಲ್ಲಿ ಹುಲಿಗಳ ಸಾವಿಗೆ ನಿಖರ ಕಾರಣ ತಿಳಿಸಿದರೆ, ಅನುಕೂಲವಾಗುತ್ತದೆ.

**ಸಂಜಯ್ ಗುಬ್ಬಿ,** ವನ್ಯಜೀವಿ ತಜ್ಞ

**ಕರ್ನಾಟಕದಲ್ಲಿ ಸಾವಿನ ಸಂಖ್ಯೆಯ ಏರಿಳಿತ**

● (ಉಗುರು, ಚರ್ಮ ವಶಕ್ಕೆ ಪಡೆದ ಪ್ರಕರಣಗಳು)

| 2021 | 2022 | 2023 | 2024 | 2025 |
|---|---|---|---|---|
| 15 (● 1) | 18 (● 1) | 12 | 13 | 14 |

3 — ಸಂರಕ್ಷಿತ ಪ್ರದೇಶದ ಒಳಗೆ ಮೃತಪಟ್ಟ ಹುಲಿಗಳ ಸಂಖ್ಯೆ


11 — ಹುಲಿ ಸಂರಕ್ಷಿತ ಪ್ರದೇಶದ ಹೊರಗೆ ಮೃತಪಟ್ಟ ಹುಲಿಗಳ ಸಂಖ್ಯೆ


14 — ರಾಜ್ಯದಲ್ಲಿ ಮೃತಪಟ್ಟ ಹುಲಿಗಳ ಒಟ್ಟು ಸಂಖ್ಯೆ

## <u>ಆರ್ಥಿಕತೆ: ತೆರಿಗೆ ಸುಧಾರಣೆಗಳು; ಜಿಎಸ್‌ಟಿ;</u>

### ❖ ಜಿಎಸ್‌ಟಿ: ₹1.74 ಲಕ್ಷ ಕೋಟಿ ಸಂಗ್ರಹ

**ಸಂದರ್ಭ: ಮರುಪಾವತಿಯಲ್ಲಿ ಶೇ 31ರಷ್ಟು ಹೆಚ್ಚಳ ಸೆಸ್ ಸಂಗ್ರಹದಲ್ಲಿ ಇಳಿಕೆ, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಡಿಸೆಂಬರ್ ತಿಂಗಳಿನಲ್ಲಿ ₹1,74,550 ಕೋಟಿ ವರಮಾನ ಸಂಗ್ರಹವಾಗಿದೆ.**




- 2024ರ ಡಿಸೆಂಬರ್‌ನಲ್ಲಿ ₹1.64 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾ ಗಿತ್ತು. ಇದಕ್ಕೆ ಹೋಲಿಸಿದರೆ 2025ರ ಡಿಸೆಂಬರ್‌ನ ವರಮಾನ ಸಂಗ್ರಹ ಶೇ 6.1ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ. ನವೆಂಬರ್‌ನಲ್ಲಿ ₹1.70 ಲಕ್ಷ ಕೋಟಿ ಸಂಗ್ರಹವಾಗಿತ್ತು.
- ಒಟ್ಟು ಜಿಎಸ್‌ಟಿ ಸಂಗ್ರಹದ ಪೈಕಿ, ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 1.2ರಷ್ಟು ಏರಿಕೆ ಕಂಡಿದ್ದು, ₹1.22 ಲಕ್ಷ ಕೋಟಿಯಾಗಿದೆ. ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನವು ₹51,977 ಕೋಟಿಯಾಗಿದ್ದು, ಶೇ 19.7ರಷ್ಟು ಏರಿಕೆಯಾಗಿದೆ.

**ಕರ್ನಾಟಕದಲ್ಲಿ ಶೇ 5ರಷ್ಟು ಬೆಳವಣಿಗೆ**

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. 2024ರ ಡಿಸೆಂಬರ್‌ನಲ್ಲಿ ₹6,389 ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಇದು 2025ರ ಡಿಸೆಂಬರ್‌ನಲ್ಲಿ ₹6,716 ಕೋಟಿಗೆ ಏರಿಕೆಯಾಗಿದ್ದು, ಶೇ 5ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

ಮಹಾರಾಷ್ಟ್ರವು ಅತಿ ಹೆಚ್ಚು, ₹16,140 ಕೋಟಿ ಜಿಎಸ್‌ಟಿ ಸಂಗ್ರಹಿಸಿದ ರಾಜ್ಯ ಎನಿಸಿದೆ. ಜಿಎಸ್‌ಟಿ ಸಂಗ್ರಹ ಬೆಳವಣಿಗೆ ದರ ಶೇ 15ರಷ್ಟಿದೆ. ಉತ್ತರಪ್ರದೇಶದಲ್ಲಿ ₹6,671 ಕೋಟಿ ಮತ್ತು ಗುಜರಾತ್‌ನಲ್ಲಿ ₹6,351 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ.

- ಜಿಎಸ್‌ಟಿ ಮರುಪಾವತಿಯಲ್ಲಿ ಶೇ 31ರಷ್ಟು ಹೆಚ್ಚಳವಾಗಿದ್ದು, ₹28,980 ಕೋಟಿಯಾಗಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ₹1.45 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.
- 2024ರ ಡಿಸೆಂಬರ್‌ನಲ್ಲಿ ಸೆಸ್ ಮೂಲಕ ₹12,003 ಕೋಟಿ ಸಂಗ್ರಹ-ವಾಗಿತ್ತು. ಅದು ಕಳೆದ ಡಿಸೆಂಬರ್‌ನಲ್ಲಿ ₹4,238 ಕೋಟಿಗೆ ಇಳಿದಿದೆ.
- ಜಿಎಸ್‌ಟಿ ಮಂಡಳಿಯು ಸೆಪ್ಟೆಂಬರ್ 22ರಂದು ಜಿಎಸ್‌ಟಿ ದರ ಪರಿಷ್ಕರಣೆ ಮಾಡಿತು. ಇದರಿಂದ ಹಲವು ಸರಕುಗಳ ಬೆಲೆ ಕಡಿಮೆ ಆಯಿತು. ಇದು ವರಮಾನ ಸಂಗ್ರಹ ಇಳಿಕೆಗೆ ಕಾರಣವಾಗಿದೆ. ನವೆಂಬರ್ ತಿಂಗಳಿಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ವರಮಾನ ಸಂಗ್ರಹದಲ್ಲಿ ಏರಿಕೆ ಕಂಡು ಬಂದಿದೆ.
- 'ಪ್ರಸಕ್ತ ಆರ್ಥಿಕ ವರ್ಷದ ಮೊದಲ ಆರು ತಿಂಗಳಿನಲ್ಲಿ ಜಿಎಸ್‌ಟಿ ಸಂಗ್ರಹವು ಸದೃಢವಾಗಿತ್ತು. ಆದರೆ, ಜಿಎಸ್‌ಟಿ ದರ ಪರಿಷ್ಕರಣೆಯ ಬಳಿಕ ಸಂಗ್ರಹದ ಪ್ರಮಾಣವು ಇಳಿಕೆ ಕಂಡಿದೆ' ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ಮಣಿ ಹೇಳಿದ್ದಾರೆ.
- **'ಮಹಾರಾಷ್ಟ್ರ, ಗುಜರಾತ್, ಕರ್ನಾಟಕ ಮತ್ತು ಹರಿಯಾಣ ಜಿಎಸ್‌ಟಿ ಸಂಗ್ರಹಕ್ಕೆ ಹೆಚ್ಚಿನ ಕೊಡುಗೆ ನೀಡಿವೆ'** ಎಂದು ಗ್ರಾಂಟ್ ಥಾರ್ನ್‌ಟನ್ ಭಾರತ್ ಪಾಲುದಾರ ಮನೋಜ್ ಹೇಳಿದ್ದಾರೆ.

## <u>ಭಾರತೀಯ ವಲಸೆಗಾರರು; ಸುದ್ದಿಯಲ್ಲಿರುವ ವ್ಯಕ್ತಿಗಳು</u>

### ❖ ಜೊಹ್ರಾನ್ ಮಮ್ದಾನಿ ಅಧಿಕಾರ ಸ್ವೀಕಾರ: ನ್ಯೂಯಾರ್ಕ್ ಮೇಯರ್ ಆಗಿ ಕುರಾನ್ ಮೇಲೆ ಕೈಯಿಟ್ಟು ಪ್ರಮಾಣವಚನ

- ಭಾರತ ಸಂಜಾತ ಜೊಹ್ರಾನ್ ಮಮ್ದಾನಿ ಅವರು ಹೊಸ ವರ್ಷದ ಮೊದಲ ದಿನದಂದು ನ್ಯೂಯಾರ್ಕ್‌ನ 112ನೇ ಮೇಯರ್ ಆಗಿ ಪ್ರಮಾಣವಚನ ಸ್ವೀಕರಿಸಿದರು.
- 34 ವರ್ಷದ ಅವರು ಅಮೆರಿಕದ ಅತಿ ದೊಡ್ಡ ನಗರದ 'ಪ್ರಥಮ ಪ್ರಜೆ'ಯಾಗಿ ಅಧಿಕಾರ ವಹಿಸಿಕೊಂಡ ಮೊದಲ ಮುಸ್ಲಿಂ ಹಾಗೂ ದಕ್ಷಿಣ ಏಷ್ಯಾದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾಲುದಾರರು.

- ನ್ಯೂಯಾರ್ಕ್ ನಗರದಲ್ಲಿ ಹೊಸ ವರ್ಷದ ಸಂಭ್ರಮ ಆರಂಭವಾಗುತ್ತಿದ್ದಂತೆಯೇ ಓಲ್ಡ್ ಸಿಟಿ ಹಾಲ್ ಸಬ್ ವೇ ಸ್ಟೇಷನ್‌ನಲ್ಲಿ ನಡೆದ ಖಾಸಗಿ ಸಮಾರಂಭದಲ್ಲಿ ಅವರು ಕುರಾನ್ ಪ್ರತಿಯ ಮೇಲೆ ಕೈಯಿಟ್ಟು ಪ್ರಮಾಣ ವಚನ ಸ್ವೀಕರಿಸಿದರು.
- ಅಟಾರ್ನಿ ನ್ಯೂಯಾರ್ಕ್ ಜನರಲ್ ಲೆಟಿಟಿಯಾ ಜೇಮ್ಸ್ ಪ್ರಮಾಣ ಬೋಧಿಸಿದರು. ಈ ಖಾಸಗಿ ಸಮಾರಂಭದಲ್ಲಿ ಮಮ್ದಾನಿ ಅವರ ಪತ್ನಿ ರಮಾ ದುವಾಜಿ, ಕುಟುಂಬ ಸದಸ್ಯರು ಮತ್ತು ಆಪ್ತರು ಪಾಲ್ಗೊಂಡರು.

## ಆರ್ಥಿಕತೆ: ಸಹಕಾರ ವ್ಯವಸ್ಥೆ

### ❖ ಜನವರಿ ಅಂತ್ಯಕ್ಕೆ 'ಭಾರತ್ ಟ್ಯಾಕ್ಸಿ'

**ಸಂದರ್ಭ: 'ಜನವರಿ ಅಂತ್ಯದ ವೇಳೆಗೆ 'ಭಾರತ್ ಟ್ಯಾಕ್ಸಿ' ಸೇವೆಯನ್ನು ದೆಹಲಿ ಸೇರಿದಂತೆ ಇತರೆ ನಗರಗಳಲ್ಲಿ ಆರಂಭಿ-ಸಲಾಗುವುದು'.**

- ಸಹಕಾರ ವ್ಯವಸ್ಥೆಯ ಅಡಿಯಲ್ಲಿ ಕೆಲಸ ನಿರ್ವಹಿಸುವ 'ಭಾರತ್ ಟ್ಯಾಕ್ಸಿ' ಆ್ಯಪ್ ಅನ್ನು ದೆಹಲಿಯಲ್ಲಿ ಪ್ರಾಯೋಗಿಕವಾಗಿ ಆರಂಭಿಸ ಲಾಗಿತ್ತು. ಸಹಕಾರ ಟ್ಯಾಕ್ಸಿ ಕೋ-ಆಪರೇಟಿವ್ ಲಿಮಿಟೆಡ್ ಈ ಆ್ಯಪ್ ಅನ್ನು ನಿರ್ವಹಿಸಲಿದೆ.
- ಈ ಪ್ರಾಯೋಗಿಕ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.ಹೀಗಾಗಿ ಅಧಿಕೃತಸೇವೆಗೆ ಈ ತಿಂಗಳ ಅಂತ್ಯದ ವೇಳೆಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದ್ದಾರೆ.
- ಈ ಆ್ಯಪ್‌ನಲ್ಲಿ ಈಗಾಗಲೇ 1.4 ಲಕ್ಷಕ್ಕೂ ಅಧಿಕ ಚಾಲಕರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ.

## ಆರ್ಥಿಕತೆ: ಸುಂಕ; ತಂಬಾಕು ಉತ್ಪನ್ನಗಳು

### ❖ ಸಿಗರೇಟು ಬೆಲೆ ಏರಿಕೆ ಸಾಧ್ಯತೆ

**ಸಂದರ್ಭ: ಹೊಸ ವ್ಯವಸ್ಥೆಯ ಅಡಿಯಲ್ಲಿ ಪ್ರತಿ 1,000 ಸಿಗರೇಟುಗಳಿಗೆ ಹೆಚ್ಚುವರಿಯಾಗಿ ₹2,050ರಿಂದ ₹8,500ರವರೆಗೆ ಸುಂಕ ವಿಧಿಸಲಾಗುತ್ತದೆ.**

- ಸುಂಕದ ಪ್ರಮಾಣವು ಸಿಗರೇಟಿನ ಉದ್ದ ಹಾಗೂ ಅದಕ್ಕೆ ಫಿಲ್ಟರ್ ಇದೆಯೇ ಎಂಬುದನ್ನು ಆಧರಿಸಿ ನಿರ್ಧಾರವಾಗಲಿದೆ.ಕೇಂದ್ರ ಸರ್ಕಾರವು ಹೊಸ ನಿಯಮವನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದ ನಂತರದಲ್ಲಿ ದೇಶದ ಪ್ರಮುಖ ಸಿಗರೇಟು ತಯಾರಿಕಾ ಕಂಪನಿಗಳ ಷೇರುಮೌಲ್ಯವು ಭಾರಿ ಪ್ರಮಾಣದಲ್ಲಿ ಕುಸಿದಿದೆ.ಐಟಿಸಿ ಷೇರುಮೌಲ್ಯವು ಶೇ 9.69ರಷ್ಟು ಕುಸಿದಿದೆ. ಗಾಡ್‌ಫ್ರೇ ಫಿಲಿಪ್ಸ್ ಕಂಪನಿಯ ಷೇರುಮೌಲ್ಯ ಶೇ 17.17ರಷ್ಟು ಕುಸಿದಿದೆ.
- ತಂಬಾಕು ಸಂಬಂಧಿತ ಕಾಯಿಲೆಗಳಿಂದ ದೇಶದ ಮೇಲೆ ಆಗುವ ಆರ್ಥಿಕ ಹೊರೆಯು ವಾರ್ಷಿಕ ₹2.4 ಲಕ್ಷ ಕೋಟಿಗಿಂತ ಹೆಚ್ಚಾಗುವ ಅಂದಾಜು ಇದೆ. ಇಂತಹ ಸಂದರ್ಭದಲ್ಲಿ ಸಿಗರೇಟು ಬಹಳ ಅಗ್ಗವಾಗಬಾರದು ಎಂಬ ಉದ್ದೇಶದಿಂದ ಸುಂಕವನ್ನು ಹೆಚ್ಚಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.ಬೇರೆ ಉತ್ಪನ್ನಗಳಿಗೆ ಹೋಲಿಸಿದರೆ ತಂಬಾಕಿನ ಮೇಲೆ ಭಾರಿ ಪ್ರಮಾಣದ ತೆರಿಗೆ ಇರಬೇಕು ಎಂಬ ಕೇಂದ್ರದ ನಿಲುವಿಗೆ ಇದು ಅನುಗುಣವಾಗಿದೆ ಎಂದು ಅದು ತಿಳಿಸಿದೆ.

## ಅಂತರರಾಷ್ಟ್ರೀಯ ಮತ್ತು ನೆರೆಹೊರೆಯ ಸಂಬಂಧ; ಪರಮಾಣು ಶಕ್ತಿ

### ❖ ಪರಮಾಣು ಸ್ಥಾವರ ಮಾಹಿತಿ ಹಂಚಿಕೆ: ಭಾರತ-ಪಾಕ್: ದ್ವಿಪಕ್ಷೀಯ ಒಪ್ಪಂದದ ಪ್ರಕಾರ ಪಟ್ಟಿ ವಿನಿಮಯ

Dr. Rajkumar IAS/KAS Academy

**ಸಂದರ್ಭ: ದ್ವಿಪಯ ಪಾಕಿಸ್ತಾನ ತಮಲ್ಲಿ ಭಾರತರ ಮತ್ತು ಸ್ಥಾವರಗಳು ಹಾಗೂ ಮೂಲಸೌಕರ್ಯಗಳ ಪಟ್ಟಿಯನ್ನು ವಿನಿಮಯ ಮಾಡಿಕೊಂಡವು. ಪರಸ್ಪರ ಉಭಯ ದೇಶಗಳು ಪರಸ್ಪರರ ಪರಮಾಣ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸುವುದನ್ನು ಈ ಒಪ್ಪಂದವು ತಡೆಯುತ್ತದೆ.**

- ವಿದೇಶಾಂಗ ಸಚಿವಾಲಯ ಒಪ್ಪಂದದ ನಿಬಂಧನೆಗಳ ಪ್ರಕಾರ ಎರಡೂ ದೇಶಗಳ ಪಟ್ಟಿಯ ವಿನಿಮಯ ಎಂದು ನಡೆದಿದೆ ವ್ಯವಹಾರಗಳ ಮಾಹಿತಿ ನೀಡಿದೆ.
- ಕಳೆದ ವರ್ಷ ಮೇನಲ್ಲಿ ನಡೆದ ನಾಲ್ಕು ದಿನಗಳ ಸೇನಾ ಸಂಘರ್ಷದಿಂದ ಎರಡೂ ದೇಶಗಳ ನಡುವಿನ ಸಂಬಂಧ ತೀವ್ರ ಹದಗೆಟ್ಟಿದ್ದರೂ ಪಟ್ಟಿಯ ವಿನಿಮಯ ನಡೆದಿದೆ.
- ರಾಜತಾಂತ್ರಿಕ ಮೂಲಕ ನವದೆಹಲಿ ಇಸ್ಲಾಮಾಬಾದ್‌ನಲ್ಲಿ ಮಾರ್ಗಗಳ ಮತ್ತು ಏಕಕಾಲದಲ್ಲಿ ಪಟ್ಟಿಗಳ ವಿನಿಮಯ ನಡೆದಿದೆ ಎಂದು ಸಚಿವಾಲಯ ಹೇಳಿದೆ. **ಉಭಯ ದೇಶಗಳು 1988ರ ಡಿಸೆಂಬರ್ 31ರಂದು ಸಹಿ ಹಾಕಿದ್ದ ಈ ಒಪ್ಪಂದವು 1991ರ ಜನವರಿ 27ರಂದು ಜಾರಿಗೆ ಬಂದಿತ್ತು.**


## ಕ್ರೀಡೆ: ಅಮೆರಿಕ ಓಪನ್ ಟೇಬಲ್ ಟೆನಿಸ್ ಚಾಂಪಿಯನ್ ಷಿಪ್

### ❖ ಅಮೆರಿಕ ಓಪನ್ ಟಿಟಿ: ಎರಡು ಕಂಚು ಗೆದ್ದ ಅಂಜನಾ ರಾವ್

- ಕರ್ನಾಟಕದ ಅಂಜನಾ ರಾವ್ ಅವರು ಅಮೆರಿಕದ ಲಾಸ್ ವೇಗಸ್‌ನಲ್ಲಿ ಇತ್ತೀಚೆಗೆ ನಡೆದ ಅಮೆರಿಕ ಓಪನ್ ಟೇಬಲ್ ಟೆನಿಸ್ ಚಾಂಪಿಯನ್ ಷಿಪ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.
- ವಿಶ್ವದ ವಿವಿಧ ದೇಶಗಳಿಂದ ಒಟ್ಟು 1300 ಮಂದಿ ಈ ಚಾಂಪಿಯನ್‌ಷಿಪ್‌ನ ವಿವಿಧ ವಿಭಾಗಗಳಲ್ಲಿ ಭಾಗವಹಿಸಿದ್ದರು. ಮಹಿಳೆಯರ 40 ವರ್ಷ ಮೇಲ್ಪಟ್ಟವರ ವಿಭಾಗದ ಸಿಂಗಲ್ಸ್‌ನಲ್ಲಿ ಮತ್ತು ಇದೇ ವಿಭಾಗದ ಡಬಲ್ಸ್‌ನಲ್ಲಿ ಅವರು ಈ ಪದಕಗಳನ್ನು ಜಯಿಸಿದ್ದಾರೆ.



ಅಂಜನಾ ರಾವ್

## <u>ಕರ್ನಾಟಕ ಆರ್ಥಿಕತೆ; ಜವಳಿ ಪಾರ್ಕ್</u>

❖ **ಜವಳಿ ಪಾರ್ಕ್: ₹390 ಕೋಟಿ ಬಿಡುಗಡೆಗೆ ಅನುಮೋದನೆ**

**ಸಂದರ್ಭ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಕಲಬುರಗಿ ಯಲ್ಲಿ ಸಮಗ್ರ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುತ್ತಿದ್ದು, ಮೂಲ ಸೌಕರ್ಯ ಕಲ್ಪಿಸಲು ₹390.26 ಕೋಟಿ ಬಿಡುಗಡೆಗೆ ಸಚಿವ ಸಂಪುಟ ಅನುಮೋದನೆ ನೀಡಿದೆ.**

- ಜವಳಿ ಪಾರ್ಕ್‌ಗೆ 180 ಮೆಗಾವಾಟ್ ವಿದ್ಯುತ್ ಪೂರೈಕೆಗೆ ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಈ ಯೋಜನೆಗೆ ನಂದಿಕೂರು ಗ್ರಾಮದ ಎಸ್‌ಟಿಪಿಯಿಂದ 12.09 ಎಂಎಲ್‌ಡಿ ನೀರು ಪೂರೈಕೆ ಮಾಡಲು ಸಮೀಕ್ಷೆ ಕೈಗೊಂಡಿದ್ದು, ಪೈಪ್‌ಲೈನ್ ಕಾರ್ಯ ಪ್ರಗತಿಯಲ್ಲಿದೆ.
- ಕೈಮಗ್ಗ ಉತ್ತೇಜನಕ್ಕೆ ಪೂರಕವಾದ ಅಂಶಗಳನ್ನು ನೂತನ ಜವಳಿ ನೀತಿಯಲ್ಲಿ ಸೇರ್ಪಡೆ ಮಾಡಲಾಗುವುದು. ಹೊಸತನ ಅಳವಡಿಸಿಕೊಂಡರೆ ಮಾತ್ರ ಕೈಮಗ್ಗ ಉದ್ಯಮಕ್ಕೆ ಭವಿಷ್ಯ ಇದೆ.

## <u>ಇತಿಹಾಸ: ಕರ್ನಾಟಕದ ಪ್ರಮುಖ ದೇವಾಲಯಗಳು</u>

❖ **'ಕುಕ್ಕೆ' ಅತ್ಯಂತ ಶ್ರೀಮಂತ ದೇಗುಲ**

**ಸಂದರ್ಭ: ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ ಆದಾಯ ಗಳಿಕೆಯಲ್ಲಿ 'ಅತ್ಯಂತ ಶ್ರೀಮಂತ' ಎನಿಸಿದೆ.**

- 2022-23ರಲ್ಲಿ ಗಳಿಕೆಯಲ್ಲಿ 'ಅತ್ಯಂತ ₹123 ಕೋಟಿ, 2023-24ರಲ್ಲಿ ₹146 ಕೋಟಿ, 2024-25ರಲ್ಲಿ 155 ಕೋಟಿ ಆದಾಯದೊಂದಿಗೆ ಮೊದಲ ಸ್ಥಾನದಲ್ಲಿದೆ.
- ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ 34,566 ದೇವಾಲಯಗಳಿದ್ದು, ಇವುಗಳಲ್ಲಿ 205 ದೇವಾಲಯಗಳು 'ಎ' ವರ್ಗ, 193 ದೇವಾಲಯಗಳು 'ಬಿ' ವರ್ಗ ಹಾಗೂ 34,168 ದೇವಾಲಯಗಳು 'ಸಿ' ವರ್ಗದಲ್ಲಿವೆ.
- ಕೊಲೂರು ಮೂಕಾಂಬಿಕಾ ದೇವಾಲಯ ಮತ್ತು ಮೈಸೂರಿನ ಚಾಮುಂಡೇಶ್ವರಿ ದೇವಾಲಯ ಕ್ರಮ ವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿವೆ.

**2024–25ನೇ ಸಾಲಿನ ರಾಜ್ಯದ 10 ಶ್ರೀಮಂತ ದೇವಾಲಯಗಳು (₹ಕೋಟಿಗಳಲ್ಲಿ)**

| ದೇವಾಲಯಗಳು | ವಾರ್ಷಿಕ ಆದಾಯ |
|---|---|
| ಕುಕ್ಕೆ ಸುಬ್ರಹ್ಮಣ್ಯ | 155 |
| ಕೊಲ್ಲೂರು ಮೂಕಾಂಬಿಕಾ | 71 |
| ಮೈಸೂರಿನ ಚಾಮುಂಡೇಶ್ವರಿ | 50 |
| ನಂಜನಗೂಡಿನ ಶ್ರೀಕಂಠೇಶ್ವರ | 36 |
| ಸವದತ್ತಿಯ ರೇಣುಕಾ ಯಲ್ಲಮ್ಮ | 30 |
| ಎಡೆಯೂರು ಸಿದ್ಧಲಿಂಗೇಶ್ವರ | 29 |
| ಕೊಪ್ಪಳದ ಹುಲಿಗೆಮ್ಮ | 17 |
| ಬ್ರಹ್ಮಾವರದ ಮಂದಾರ್ತಿಯ ದುರ್ಗಾಪರಮೇಶ್ವರಿ | 16 |
| ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ | 13 |
| ಬೆಂಗಳೂರಿನ ಬನಶಂಕರಿ | 11 |

## <u>ಕರ್ನಾಟಕ ಭೌಗೋಳಿಕತೆ: ಸೌರಶಕ್ತಿ</u>

❖ **2,520 ಮೆ.ವಾ ಸೌರ ವಿದ್ಯುತ್: ಟೆಂಡರ್**

**ಸಂದರ್ಭ: ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ಹೊತ್ತಿನಲ್ಲೇ ಗುಣಮಟ್ಟದ ವಿದ್ಯುತ್ ಪೂರೈಸುವ ಉದ್ದೇಶದಿಂದ ರೂ ಪಿ ಸಿ ರು ವ ಕು ಸು ಮ್ . ಸಿ ಮೆಗಾವಾಟ್ ಯೋಜನೆಯಡಿ ರಾಜ್ಯದಲ್ಲಿ 2,520 ಸೌರ ವಿದ್ಯುತ್ ಉತ್ಪಾದನೆಗೆ ಸರ್ಕಾರ ಮುಂದಡಿ ಇಟ್ಟಿದೆ.**

- ಆರಂಭದಲ್ಲಿ ಈ ಯೋಜನೆಯಡಿ 3,900 ಮೆಗಾವಾಟ್ 2 ಉತ್ಪಾದಿಸುವ ಗುರಿ ಇತ್ತು. ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ರಾಜ್ಯದಲ್ಲಿ ಇನ್ನೂ 750 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಅವಕಾಶ ಕಲ್ಪಿಸಿದೆ. 2.520 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆಯಲಾಗಿದೆ.
- ಯೋಜನೆಯಡಿ 1 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆಗೆ ಸುಮಾರು 24 ಕೋಟಿ ವೆಚ್ಚವಾಗಲಿದೆ. ಕೇಂದ್ರ ಸರ್ಕಾರವು ₹1 ಕೋಟಿ ಸಹಾಯಧನ ನೀಡಲಿದೆ. ಉಳಿದ ಹಣವನ್ನು ಖಾಸಗಿ ಕಂಪನಿಗಳೇ ಭರಿಸಬೇಕಾಗುತ್ತದೆ. ಉತ್ಪಾದನಾ ವೆಚ್ಚ ಆಧರಿಸಿ ಕರ್ನಾಟಕ ವಿದ್ಯುತ್ ನಿಯಂತ್ರಣ ಅಯೋಗ ಪ್ರತಿ

Rajkumar IAS/KAS Academy


ಯೂನಿಟ್ ವಿದ್ಯುತ್‌ಗೆ ಗರಿಷ್ಠ ₹3.17 ದರ ನಿಗದಿಪಡಿಸಿದೆ. ಆ ಪ್ರಕಾರ ಖರೀದಿ ಮಾಡಿ, ಅಯಾ ಫೀಡರ್‌ಗಳ ವ್ಯಾಪ್ತಿಯಲ್ಲಿ ಬರುವ ರೈತರ ಪಂಪ್‌ಸೆಟ್‌ಗಳಿಗೆ ಪೂರೈಸಲಾಗುತ್ತದೆ.

- ಕುಸುಮ್-ಸಿ ಯೋಜನೆಯಡಿ ರಾಜ್ಯದಲ್ಲಿನ 397 ವಿದ್ಯುತ್ ಸರಬರಾಜು ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ 2,520 ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಆರಂಭಿ ಸಲಾಗುತ್ತದೆ.
- ಇದರಿಂದ 1,684 ಫೀಡರ್‌ಗಳ 6,70,185 ಕೃಷಿ ಪಂಪ್‌ಸೆಟ್‌ಗಳಿಗೆ ಸೌರ ವಿದ್ಯುತ್ ನೀಡಲು ಉದ್ದೇ-ಶಿಸಲಾಗಿದೆ. ಇದರಿಂದಾಗಿ ರೈತರ ಬೆಳೆಗಳಿಗೆ ನೀರು ಹರಿಸಲು ಹಗಲಿನಲ್ಲೇ ವಿದ್ಯುತ್ ಲಭ್ಯವಾಗಲಿದೆ.
- ಅಲದೆ ವಿದ್ಯುತ್ ಪರಿವರ್ತಕಗಳ ಮೇಲಿನ ಒತ್ತಡವೂ ಕಡಿಮೆಯಾಗಲಿದೆ.
- ಬೆಸ್ಕಾಂ ವ್ಯಾಪ್ತಿಯಲ್ಲಿ ಕುಸುಮ್ ವಿದ್ಯುತ್ ಸಿ ಯೋಜನೆಯಡಿ ಒಟ್ಟು 1,159 ಮೆಗಾವಾಟ್ ಸೌರ ಉತ್ಪಾದಿಸುವ 157 ಯೋಜನೆಗಳಿಗೆ ಟಕ ಅನುಮತಿ ನೀಡಲಾಗಿದೆ. ಈ ಪೈಕಿ ಸುಮಾರು 200 ಮೆಗಾವಾಟ್ ಸಾಮರ್ಥ್ಯದ 32 ಯೋಜನೆಗಳು ಪೂರ್ಣಗೊಂಡಿವೆ. ಈ ತಿಂಗಳ ಅಂತ್ಯದ ವೇಳೆಗೆ 500 ಮೆಗಾವಾಟ್ ಹಾಗೂ ಮಾರ್ಚ್‌ಗೆ 1.051 ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಗಳು ಪೂರ್ಣಗೊಳ್ಳಲಿದೆ.
- 2025ರ ಜೂನ್‌ನಲ್ಲಿ 'ಕುಸುಮ್ ಸಿ'ಗೆ ಚಾಲನೆ, 4,650 ಮೆಗಾವಾಟ್ ವಿದ್ಯುತ್ ಉತ್ಪಾದನೆಯ ಗುರಿ

## ಪರಿಸರ: ಚೀತಾ

### ❖ ಅತಿವಿರಳ 'ಚಂದನ ಚಿರತೆ" ಗೋಚರ

**ಸಂದರ್ಭ: ಅತಿವಿರಳ ಸಂದರ್ಭದಲ್ಲಿ ರೂಪುಗೊಳ್ಳುವ ಗಂಧದ ಬಣ್ಣದ ಚರ್ಮ-ತುಪ್ಪಳ ಮತ್ತು ಮಂಕಾದ ಕಂದು ಬಣ್ಣದ ಚುಕ್ಕೆಗಳಿರುವ ಚಿರತೆಯು ರಾಜ್ಯದ ವಿಜಯನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ. ಇದನ್ನು ಪತ್ತೆ ಮಾಡಿರುವ ವನ್ಯಜೀವಿ ತಜ್ಞರ ತಂಡವು, ಇದಕ್ಕೆ 'ಚಂದನ ಚಿರತೆ' ಎಂದು ಹೆಸರಿಟ್ಟಿದೆ.**




- ಕಲ್ಯಾಣ ಕರ್ನಾಟಕ ಭಾಗದಲ್ಲಿನ ವನ್ಯಜೀವಿಗಳ ಅಧ್ಯಯನ ನಡೆಸುತ್ತಿರುವ ಹೊಳೆಮತ್ತಿ ನೇಚರ್ ಫೌಂಡೇಶನ್ (ಎಚ್‌ಎನ್‌ಎಫ್) ವಿಜಯನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಕ್ಯಾಮೆರಾಟ್ರ್ಯಾಪಿಂಗ್ ಸಾಧನಗಳನ್ನು ಅಳವಡಿಸಿತ್ತು. ಈ ಕ್ಯಾಮೆರಾಗಳಲ್ಲಿ ಅತ್ಯಪರೂಪದ 'ಚಂದನ ಚಿರತೆ' ಹಲವು ಬಾರಿ ಸೆರೆಯಾಗಿದೆ.
- ಸಾಮಾನ್ಯ ಚಿರತೆಗಳು ಹಳದಿ-ಕಂದು ಮಿಶ್ರಿತ ಚರ್ಮ ಮತ್ತು ಕಪ್ಪು ಬಣ್ಣದ ಚುಕ್ಕೆಗಳನ್ನು ಹೊಂದಿರುತ್ತವೆ. ಆದರೆ, ಈ ಚಿರತೆಯು ಗಂಧದ ಬಣ್ಣವನ್ನು ಹೋಲುವ ಕೆಂಪು-ಗುಲಾಬಿ ಮಿಶ್ರಿತ ಬಣ್ಣದ ತುಪ್ಪಳ ಮತ್ತು ಮಾಸಲು ಕಂದು ಬಣ್ಣದ ಚುಕ್ಕೆ ಹೊಂದಿದೆ. ಜಗತ್ತಿನಾದ್ಯಂತ ಈವರೆಗೆ ಕೆಲವು ಬಾರಿಯಷ್ಟೇ ಈ ಸ್ವರೂಪದ ಚಿರತೆಗಳು ಪತ್ತೆಯಾಗಿವೆ.
- ಸ್ಟ್ರಾಬೆರಿ 'ಜಾಗತಿಕವಾಗಿ ಇಂತಹದ್ದನ್ನು ಚಿರತೆ (Strawberry Leopard) ಎಂದು ಕರೆಯುತ್ತಾರೆ. ಆದರೆ ಈ ರೂಪಾಂತರಕ್ಕೆ ಸ್ಥಳೀಯ ಗುರುತನ್ನು ನೀಡಲು ಮತ್ತು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸಲು ಮಾಡಲಾಗಿದೆ' ಎಂದು ಎಚ್‌ಎನ್‌ಎಫ್ 'ಚಂದನ ಚಿರತೆ' ಎಂದು ನಾಮಕರಣ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.
- ದಕ್ಷಿಣ ಆಫ್ರಿಕಾದಲ್ಲಿ ಕೆಲವು ಬಾರಿ, ತಾಂಜೇನಿಯಾದಲ್ಲಿ ಒಂದು ಬಾರಿ, ರಾಜಸ್ಥಾನದ ರಣಕಪುರದಲ್ಲಿ 2021ರಲ್ಲಿ ಇಂತಹ ಚಿರತೆ ಕಾಣಿಸಿಕೊಳ್ಳುತ್ತಿರುವುದು ಇಂತಹ ಚಿರತೆ ಪತ್ತೆಯಾಗಿತ್ತು. ಭಾರತದಲ್ಲಿ ಇದು ಎರಡನೇ ಬಾರಿ, ಕರ್ನಾಟಕ ದಲ್ಲಿ ಇದೇ ಮೊದಲ ಬಾರಿ ಎಂದು ಎಚ್‌ಎನ್‌ಎಫ್ ಮಾಹಿತಿ ನೀಡಿದೆ.

**ಆರೋಗ್ಯ:**

❖ **ಹರಿಯಾಣ: ಲಿಂಗಾನುಪಾತ ಹೆಚ್ಚಳ**

**ಸಂದರ್ಭ: ಹರಿಯಾಣ ರಾಜ್ಯದಲ್ಲಿ ಲಿಂಗಾನುಪಾತದಲ್ಲಿ ಗಮನಾರ್ಹ ಸುಧಾರಣೆ ಕಂಡಿದ್ದು, 2025ರಲ್ಲಿ ಈ ಪ್ರಮಾಣ 923ಕ್ಕೆ ಏರಿಕೆಯಾಗಿದೆ. ಇದು ಕಳೆದ ಐದು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಹೆಚ್ಚಿನ ಏರಿಕೆ ಕಂಡಿದೆ.**

- ***2024ರಲ್ಲಿ ಲಿಂಗಾನುಪಾತ ಪ್ರಮಾಣ 1000 ಪುರುಷರಿಗೆ 910 ಮಹಿಳೆಯರಿದ್ದರು. 2025ರಲ್ಲಿ ಮಹಿಳೆಯರ ಪ್ರಮಾಣ 1000 ಪುರುಷರಿಗೆ 923ಕ್ಕೆ ಏರಿದೆ. ಒಂದು ವರ್ಷದಲ್ಲಿ ಅನುಪಾತದ ಪ್ರಮಾಣದಲ್ಲಿ 13 ಅಂಶಗಳಷ್ಟು ಜಿಗಿತಕಂಡಿದೆ.***
- ಪ್ರಸವಪೂರ್ವ ಲಿಂಗ ಪತ್ತೆ ಮತ್ತು ಅಕ್ರಮ ಗರ್ಭಪಾತಗಳ ತಡೆಗಾಗಿ ಸರ್ಕಾರ ಕೈಗೊಂಡ ಕ್ರಮಗಳು, ಅನುಪಾತ ಹೆಚ್ಚಳಕ್ಕೆ ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ.
- 2025 ರಲ್ಲಿ 5,19,691 ಜನನ ಪ್ರಮಾಣ ದಾಖಲಾಗಿದೆ. ಇದರಲ್ಲಿ 2,70,281 ಬಾಲಕರು ಮತ್ತು 2,49,410 ಬಾಲಕಿಯರು ಜನಿಸಿದ್ದಾರೆ. 2024 ರಲ್ಲಿ 5,16,402 ಜನನ ಪ್ರಮಾಣ ದಾಖಲಾಗಿದೆ. ಇದರಲ್ಲಿ 2,46,048 ಬಾಲಕಿಯರು ಜನಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

**-------------------------------------------ಶುಭವಂದನೆಗಳು--------------------------------------**

Dr. Rajkumar IAS/KAS Academy

